# ಬೆಳಗಾವಿ ವಾರ್ತೆ

ಕನ್ನಡ ದಿನ ಪತ್ರಿಕೆ, ಬೆಳಗಾವಿ

ಸಂಪಾದಕರು: ಮಹೇಶ್ವರಿ ಭೀಮಶಿ ಭರಮಣ್ಣವರ
EDITOR: MAHESHWARI BHIMASHI BHARAMANNAVARA

BELAGAVI VARTE
KANNADA DAILY MORNING BELAGAVI

G-mail: belagavivarte1@gmail.com
epaper. belagavivarte.com

Volume: 01 | Issue : 25 | WEDNESDAY 01-04-2026 | PRGI No : KNKAN/26/A0962 | Pages:4 | Rs.2.00 | M: 9742418836


## SSLC ಯಲ್ಲಿ ತೃತೀಯ ಭಾಷೆಗೆ ಗ್ರೇಡಿಂಗ್ ವ್ಯವಸ್ಥೆ: ಪ್ರಧಾನಿ ಮೋದಿ ವಿರುದ್ಧ ಸೇಡು ತೀರಿಸಿಕೊಳ್ಳಲು ಸರ್ಕಾರ ತಂದ ಕ್ರಮ– ಆರ್ ಅಶೋಕ್



ತೃತೀಯ ಭಾಷೆಯಲ್ಲಿ ಗ್ರೇಡಿಂಗ್ ವ್ಯವಸ್ಥೆ ವಿದ್ಯಾರ್ಥಿಗಳು ಒಂದು ವರ್ಷದಿಂದ ಪರೀಕ್ಷೆಗೆ ತಯಾರಾಗಿರುವ ಸಂದರ್ಭದಲ್ಲಿ ನಿರ್ಧಾರ ತೆಗೆದುಕೊಳ್ಳಲಾಗಿದೆ. ಸರ್ಕಾರಕ್ಕೆ ಸ್ವಲ್ಪ ಸಾಮಾನ್ಯ ಬುದ್ಧಿ ಇದ್ದಿದ್ದರೆ, ಆರಂಭದಲ್ಲೇ ಈ ತೀರ್ಮಾನ ತೆಗೆದುಕೊಳ್ಳಬೇಕಿತ್ತು. ಈಗ ಲಕ್ಷಾಂತರ ವಿದ್ಯಾರ್ಥಿಗಳು ಹಗಲು–ರಾತ್ರಿ ಹಿಂದಿ ಅಭ್ಯಾಸ ಮಾಡಿದ್ದಾರೆ. ಇದರಿಂದ ಅವರ ಶೇಕಡಾವಾರು ಹೆಚ್ಚಾಗುತ್ತಿತ್ತು. ಇದು ಏಕಪಕ್ಷೀಯ ನಿರ್ಧಾರ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್ ಅಶೋಕ್ ವಾಗ್ದಾಳಿ ನಡೆಸಿದ್ದಾರೆ.

ಮಕ್ಕಳು ತುಂಬಾ ಸಂವೇದನಾಶೀಲರಾಗಿರುತ್ತಾರೆ. ಈ ನಿರ್ಧಾರವು ವಿದ್ಯಾರ್ಥಿಗಳಿಗೆ ಅನ್ಯಾಯವಾಗಿದೆ, ಉರ್ದು ಭಾಷೆಯನ್ನು "ವಿದೇಶಿ" ಮತ್ತು "ಭಾರತೀಯವಲ್ಲದ" ಭಾಷೆ ಎಂದು ಹೇಳಿ, ಮತಗಳಿಗಾಗಿ ಕಾಂಗ್ರೆಸ್ ಅದನ್ನು ಉತ್ತೇಜಿಸುತ್ತಿದೆ ಎಂದು ಕೂಡ ಆರ್ ಅಶೋಕ್ ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದರು.

ಮಹಾತ್ಮ ಗಾಂಧೀಜಿ 1918ರಲ್ಲಿ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯನ್ನು ಸ್ಥಾಪಿಸಿದ್ದನ್ನು ನೆನಪಿಸಿದ ಅಶೋಕ್, ನೀವು ಮಹಾತ್ಮ ಗಾಂಧೀಜಿಯನ್ನು ಹೇಗೆ ಗೌರವಿಸುತ್ತೀರಿ? ಗಾಂಧೀಜಿಯವರ ಹೆಸರನ್ನು ನರೇಗಾ ಯೋಜನೆಯಿಂದ ತೆಗೆದಾಗ, ದೊಡ್ಡ ಅನ್ಯಾಯವಾಗಿದೆ ಎಂಬಂತೆ ವರ್ತಿಸಿದರು. ಈಗ ಏಕೆ ಮಾಡುತ್ತಿಲ್ಲ ಎಂದು ಪ್ರಶ್ನಿಸಿದರು.

ಇದೇ ವೇಳೆ, ಮಾಜಿ ಪ್ರಧಾನ ಮಂತ್ರಿಗಳಾದ ಜವಾಹರಲಾಲ್ ನೆಹರು ಮತ್ತು ಇಂದಿರಾ ಗಾಂಧೀಜಿ ತ್ರಿಭಾಷಾ ಸೂತ್ರವನ್ನು ಉತ್ತೇಜಿಸಿದ್ದರು ಎಂದು ಹೇಳಿದರು.

ಕನ್ನಡ ಮಕ್ಕಳು ಐಎಎಸ್, ಐಪಿಎಸ್ ಮಾಡಿ ಹಿಂದಿ ಭಾಷೆಯ ರಾಜ್ಯಗಳಿಗೆ ಹೋದರೆ, ಅಲ್ಲಿ ಯಾವ ಭಾಷೆಯಲ್ಲಿ ಮಾತನಾಡುತ್ತಾರೆ? ಈ ನಿರ್ಧಾರವನ್ನು ಪ್ರಧಾನಿ ನರೇಂದ್ರ ಮೋದಿ ವಿರುದ್ಧದ ಕೋಪದಿಂದ ಮಾತ್ರ ತೆಗೆದುಕೊಳ್ಳಲಾಗಿದೆ. ಇದು ಮತಬ್ಯಾಂಕ್ ರಾಜಕೀಯವಲ್ಲದೆ ಇನ್ನೇನೂ ಅಲ್ಲ; ಮಕ್ಕಳ ಜೀವನದ ಮೇಲೆ ಕಲ್ಲು ಎಸೆಯುವಂತದ್ದು ಎಂದು ಅಶೋಕ್ ಆರೋಪಿಸಿದರು.

## ಯಡಿಯೂರಪ್ಪ, ಬೊಮ್ಮಾಯಿ ಸರ್ಕಾರ ಬರೀ ಲೂಟಿ ಮಾಡಿದ್ದು ಬಿಟ್ಟರೆ ಅಭಿವೃದ್ಧಿ ಕಾರ್ಯ ಮಾಡಲಿಲ್ಲ: ಸಿಎಂ ಸಿದ್ದರಾಮಯ್ಯ



ಕೇಂದ್ರದಲ್ಲಿರುವ ಬಿಜೆಪಿ ಸರ್ಕಾರ ಆಲಮಟ್ಟಿ ವಿಚಾರದಲ್ಲಿ ಜನವಿರೋಧಿ ನಿಲುವು ಹೊಂದಿದೆ. ಹದಿಮೂರು ವರ್ಷಗಳಿಂದ ಗೆಜೆಟ್ ನೋಟಿಫಿಕೇಶನ್ ಕೂಡ ಮಾಡಲಿಲ್ಲ. ನಾಲ್ಕು ವರ್ಷ ಅಧಿಕಾರದಲ್ಲಿದ್ದಾಗಲೂ ಭೂ ಪರಿಹಾರ ಘೋಷಿಸಿದರೂ ಹಣ ನೀಡಲಿಲ್ಲ ಎಂದು ಬಾಗಲಕೋಟೆಯಲ್ಲಿ ಸಿಎಂ ಸಿದ್ದರಾಮಯ್ಯ ಆರೋಪಿಸಿದ್ದಾರೆ.

ಯಡಿಯೂರಪ್ಪ, ಬೊಮ್ಮಾಯಿ ಸರ್ಕಾರ ಬರೀ ಲೂಟಿ ಮಾಡಿದ್ದು ಬಿಟ್ಟರೆ ಅಭಿವೃದ್ಧಿ ಕಾರ್ಯ ಮಾಡಲಿಲ್ಲ. ಒಂದೇ ಒಂದು ರೂಪಾಯಿ ರೈತರ ಸಾಲ ಮನ್ನಾ ಮಾಡಲಿಲ್ಲ ಅಧಿಕಾರದಲ್ಲಿದ್ದಾಗ ಜನರಿಗೆ ಸ್ಪಂದಿಸದೆ, ಈಗ ನಮ್ಮ ಗ್ಯಾರಂಟಿಗಳ ಬಗ್ಗೆ ಅಪಪ್ರಚಾರ ಮಾಡುತ್ತಿರುವ ಬಿಜೆಪಿಯವರಿಗೆ ಮತ ಕೇಳುವ ಯಾವ ನೈತಿಕತೆ ಇದೆ ಎಂದು ಪ್ರಶ್ನಿಸಿದ್ದಾರೆ.

ಬಾಗಲಕೋಟೆ ಕ್ಷೇತ್ರದ ಉಪ ಚುನಾವಣೆಯಲ್ಲಿ ಉಮೇಶ್ ಮೇಟಿ ಪರ ಪ್ರಚಾರ ಮಾಡಿದ ಅವರು, ನನ್ನ ಆತ್ಮೀಯರೂ–ಪಕ್ಷ ನಿಷ್ಠೆ ಇದ್ದವರಾಗಿದ್ದ ಎಚ್.ವೈ. ಮೇಟಿ ಅವರ ಆತ್ಮಕ್ಕೆ ಶಾಂತಿ ಸಿಗಬೇಕಾದರೆ ಉಮೇಶ್ ಮೇಟಿ ಗೆಲ್ಲಬೇಕು. ನಾನೇ ಚುನಾವಣೆಗೆ ನಿಂತಿದ್ದೀನಿ ಎಂದುಕೊಂಡು ಮತ ಹಾಕಿ ಎಂದು ಮನವಿ ಮಾಡಿದರು.

ನುಡಿದಂತೆ ನಡೆದು ಕೆಲಸ ಮಾಡುತ್ತಿರುವ ನಮ್ಮ ಸರ್ಕಾರದ ಬಗ್ಗೆ ಬಿಜೆಪಿ ಅಪಪ್ರಚಾರ ಮಾಡುತ್ತಿದೆ. ಆದರೆ, ಬಿಜೆಪಿ ಸರ್ಕಾರ ತನ್ನ ಅವಧಿಯಲ್ಲಿ ಬಾಕಿ ಉಳಿಸಿದ್ದ 30 ಸಾವಿರ ಕೋಟಿಯಲ್ಲಿ ನಮ್ಮ ಸರ್ಕಾರ 24 ಸಾವಿರ ಕೋಟಿ ರೂಪಾಯಿ ಬಾಕಿ ತೀರಿಸಿದೆ. ಹಣ ಇಲ್ಲದಿದ್ದರೂ ಬಿಜೆಪಿಯವರು ಗುತ್ತಿಗೆ ನೀಡಿ ಹೋದರು ಎಂದರು.

ಆಲಮಟ್ಟಿ ಅಣೆಕಟ್ಟನ್ನು 524 ಮೀಟರ್ ಗೆ ಎತ್ತರಿಸುವ ಹಾಗೂ ರೈತರಿಗೆ ಪರಿಹಾರ ಕೊಡುವ ಕೆಲಸ ಮಾಡದ ಬಿಜೆಪಿ ಈ ಭಾಗದ ಅಭಿವೃದ್ಧಿಯನ್ನೇ ಮಾಡಲಿಲ್ಲ. ವೀರಣ್ಣ ಚರಂತಿಮಠ್ ಅವರನ್ನು ನೋಡುವುದೇ ಕಷ್ಟ, ಮನೆಗೆ ಯಾರನ್ನೂ ಸೇರಿಸದ ಚರಂತಿಮಠ್ ಅವರು ಶಾಸಕರಾಗಲು ಲಾಯಕ್ಕಾ ಎನ್ನುವುದನ್ನು ಯೋಚಿಸಿ. ಮೇಟಿ ಅವರು ಅತ್ಯಂತ ಸರಳ ಮತ್ತು ಜನಪರ ವ್ಯಕ್ತಿ ಆಗಿದ್ದರು. ಇವರ ಮಗ ಉಮೇಶ್ ಮೇಟಿ ಅವರನ್ನು ಗೆಲ್ಲಿಸಿದರೆ ಮೇಟಿ ಅವರ ಆತ್ಮಕ್ಕೆ ಶಾಂತಿ ಸಿಗುತ್ತದೆ ಎಂದರು.

ಎಲ್ಲರ ಹಿತ ಮತ್ತು ಸರ್ವ ಜನಾಂಗದ ಏಳಿಗೆಯನ್ನು ಬಯಸುವ ಪಕ್ಷ ಕಾಂಗ್ರೆಸ್ ಪಕ್ಷ. ಬಿಜೆಪಿಯವರು ಕೃಷ್ಣಾ ಮೇಲ್ದಂಡೆ ಜಾರಿ ಮಾಡಲಿಲ್ಲ. 13 ವರ್ಷದಿಂದ ಈ ಬಗ್ಗೆ ಗೆಜೆಟ್ ನೋಟಿಫಿಕೇಶನ್ ಮಾಡಲಿಲ್ಲ. ಕೇಂದ್ರದಲ್ಲಿ ಇರುವುದು ಚರಂತಿಮಠ್ ಅವರ ಪಕ್ಷ. ನಾವು ಹಲವು ಬಾರಿ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರದ ನೀರಾವರಿ ಸಚಿವರನ್ನು ಭೇಟಿ ಮಾಡಿ ಮನವಿ ಮಾಡಿದರೂ ನಮ್ಮ ಮನವಿಯನ್ನು ಈಡೇರಿಸಲಿಲ್ಲ. ಇವತ್ತು ಬಾಗಲಕೋಟೆಯಲ್ಲಿ ಸರ್ಕಾರಿ ಮೆಡಿಕಲ್ ಕಾಲೇಜು ಬರುತ್ತಿರುವುದಕ್ಕೆ ಮೇಟಿಯವರ ಶ್ರಮ ಕಾರಣ. ಹೀಗಾಗಿ ಉಮೇಶ್ ಮೇಟಿಯವರನ್ನೂ ಗೆಲ್ಲಿಸಿ ಕಳುಹಿಸಿದರೆ ನನ್ನ ಕೈ ಬಲಪಡಿಸಿದಂತಾಗುತ್ತದೆ ಎಂದರು.



## ಕಿತ್ತೂರು ತಾಲೂಕಿನಲ್ಲಿ ಸಹಕಾರಿ ಸಂಘಗಳ ಪದಾಧಿಕಾರಿಗಳಿಗೆ ಅಭಿನಂದನಾ ಸಮಾರಂಭ




**<u>ಬೆಳಗಾವಿ ವಾರ್ತೆ ಬೆಳಗಾವಿ:</u>** ಜಿಲ್ಲೆಯ ಕಿತ್ತೂರು ತಾಲೂಕಿನಲ್ಲಿ ವಿವಿಧ ಸಹಕಾರಿ ಸಂಘಗಳ ನೂತನ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರಿಗಾಗಿ ಹಮ್ಮಿಕೊಳ್ಳಲಾಗಿದ್ದ ಅಭಿನಂದನಾ ಸಮಾರಂಭವು ಅತ್ಯಂತ ವೈಭವದಿಂದ ಜರುಗಿತು.ಈ ಕಾರ್ಯಕ್ರಮದಲ್ಲಿ ಕಿತ್ತೂರು ಶಾಸಕ ಬಾಬಾಸಾಹೇಬ ಪಾಟೀಲ, ಅರಭಾವಿ ಶಾಸಕ ಬಾಲಚಂದ್ರ ಜಾರಕಿಹೊಳಿ, ಡಿಸಿಸಿ ಬ್ಯಾಂಕ್ ಅಧ್ಯಕ್ಷ ಅಣ್ಣಾಸಾಹೇಬ ಜೊಲ್ಲೆ, ಎಂಎಲ್ಸಿ ಚನ್ನರಾಜ ಹಟ್ಟಿಹೊಳಿ, ಡಿಸಿಸಿ ಬ್ಯಾಂಕ್ ನಿರ್ದೇಶಕ ನಾನಾಸಾಹೇಬ ಪಾಟೀಲ ಹಾಗೂ ಬಿಜೆಪಿ ಮುಖಂಡ ಡಾ. ಪರವಣ್ಣವರ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು. ಕಾರ್ಯಕ್ರಮಕ್ಕೆ ರೈತ ಗೀತೆ ಮತ್ತು ದೀಪ ಬೆಳಗಿಸುವ ಮೂಲಕ ಅಧಿಕೃತ ಚಾಲನೆ ನೀಡಲಾಯಿತು. ಅಭಿನಂದನಾ ಸಮಾರಂಭವು ಮೂಲತಃ ಪಕ್ಷಾತೀತವಾಗಿ ಆಯೋಜನೆಯಾಗಿದ್ದರೂ, ವೇದಿಕೆಯ ಮೇಲೆ ರಾಜಕೀಯ ವಾಕ್ಸಮರ ಕಂಡುಬಂದಿದ್ದು ವಿಶೇಷವಾಗಿತ್ತು. ಕಿತ್ತೂರು ಕ್ಷೇತ್ರದ ಬಿಜೆಪಿ ಮುಖಂಡ ಡಾ. ಪರವಣ್ಣವರ ಮಾತನಾಡುವ ವೇಳೆ ತಮ್ಮದೇ ಪಕ್ಷದ ನಾಯಕರ ವಿರುದ್ಧ ತೀವ್ರ ಅಸಮಾಧಾನ ಹೊರಹಾಕಿದರು. ಈ ಕಾರ್ಯಕ್ರಮಕ್ಕೆ ಜನ ಬರುವುದಿಲ್ಲ ಎಂದು ಟೀಕಿಸಿದವರಿಗೆ ಇವತ್ತಿನ ಜನಸಮೂಹವೇ ಉತ್ತರ ನೀಡಿದೆ ಎಂದು ಹೇಳಿದ ಅವರು, ಮುಂದಿನ ದಿನಗಳಲ್ಲಿ ಕ್ಷೇತ್ರದಲ್ಲಿ ದೊಡ್ಡ ಬದಲಾವಣೆಗಳು ಆಗಲಿವೆ ಎಂದು ಭವಿಷ್ಯ ನುಡಿದರು. ಅಲ್ಲದೆ, ರಾಜಕೀಯದಲ್ಲಿ ನಮಗೆ ಆದ ಅವಮಾನಕ್ಕೆ ಚಕ್ರಬಡ್ಡಿ ಸಮೇತ ಲೆಕ್ಕ ಚುಕ್ತಾ ಮಾಡುವ ಸಮಯ ಬಂದಿದೆ ಎಂದು ಎಚ್ಚರಿಸಿದರು.ಇದೇ ಸಂದರ್ಭದಲ್ಲಿ ಮಾತನಾಡಿದ ಎಂಎಲ್ಸಿ ಚನ್ನರಾಜ ಹಟ್ಟಿಹೊಳಿ ಅವರು, ಸಹಕಾರಿ ರಂಗದಲ್ಲಿ ನಾವು ಯಾವುದೇ ರಾಜಕೀಯ ಭೇದಭಾವ ಮಾಡದೆ ರೈತರ ಹಿತದೃಷ್ಟಿಯಿಂದ ಕೆಲಸ ಮಾಡುತ್ತಿದ್ದೇವೆ ಮತ್ತು ಸ್ಥಳೀಯ ಶಾಸಕರೊಂದಿಗೆ ಸೇರಿ ರೈತರಿಗೆ ಹೆಚ್ಚಿನ ಸೇವೆ ಒದಗಿಸಲು ಬದ್ಧರಾಗಿದ್ದೇವೆ ಎಂದು ತಿಳಿಸಿದರು. ಡಿಸಿಸಿ ಬ್ಯಾಂಕ್ ಅಧ್ಯಕ್ಷ ಅಣ್ಣಾಸಾಹೇಬ ಜೊಲ್ಲೆ ಅವರು ಮಾತನಾಡಿ, ರೈತರಿಗೆ ಸಣ್ಣಪುಟ್ಟ ಸಾಲ ಸೌಲಭ್ಯಗಳನ್ನು ನೀಡಲು ಬ್ಯಾಂಕ್ ಸದಾ ಸಿದ್ಧವಿದ್ದು, ಕಿತ್ತೂರು ತಾಲೂಕಿನಲ್ಲಿ ಹೊಸ ಕಚೇರಿಯನ್ನು ಶೀಘ್ರವೇ ಆರಂಭಿಸಲಾಗುವುದು ಎಂದರು.

ಬ್ಯಾಂಕಿನ ವಿರುದ್ಧದ ಸುಳ್ಳು ಆರೋಪಗಳಿಗೆ ಸಾರ್ವಜನಿಕರು ಕಿವಿಗೊಡಬಾರದೆಂದು ಅವರು ಇದೇ ವೇಳೆ ಮನವಿ ಮಾಡಿದರು.ಅರಭಾವಿ ಶಾಸಕ ಬಾಲಚಂದ್ರ ಜಾರಕಿಹೊಳಿ ಅವರು ಮಾತನಾಡಿ, ಇದು ರೈತರ ಪರವಾದ ಕಾರ್ಯಕ್ರಮವಾಗಿದ್ದು ಇಲ್ಲಿ ಎಲ್ಲರೂ ನಮ್ಮವರೇ ಎಂಬ ಭಾವನೆಯಿಂದ ಕೆಲಸ ಮಾಡುತ್ತಿದ್ದೇವೆ ಎಂದು ಸ್ಪಷ್ಟಪಡಿಸಿದರು. ಡಿಸಿಸಿ ಬ್ಯಾಂಕ್ ಕುರಿತಾದ ಗೊಂದಲಗಳಿಗೆ ಶೀಘ್ರದಲ್ಲೇ ಪತ್ರಿಕಾಗೋಷ್ಠಿ ಮೂಲಕ ಸ್ಪಷ್ಟನೆ ನೀಡುವುದಾಗಿ ಅವರು ತಿಳಿಸಿದರು. ಕಿತ್ತೂರು ಶಾಸಕ ಬಾಬಾಸಾಹೇಬ ಪಾಟೀಲ ಅವರು ಮಾತನಾಡಿ, ಕ್ಷೇತ್ರದಲ್ಲಿ ರೈತರ ಅಭಿವೃದ್ಧಿಗಾಗಿ ಹೊಸ ಯೋಜನೆಗಳನ್ನು ತರಲಾಗುವುದು ಹಾಗೂ ಮಹಿಳೆಯರಿಗೆ ಸ್ವಯಂ ಉದ್ಯೋಗದ ಅವಕಾಶಗಳನ್ನು ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದರು. ಕಾರ್ಯಕ್ರಮದ ಅಂತ್ಯದಲ್ಲಿ ಭಾಗವಹಿಸಿದ್ದ ಎಲ್ಲ ಪದಾಧಿಕಾರಿಗಳನ್ನು ಮತ್ತು ಗಣ್ಯರನ್ನು ಸನ್ಮಾನಿಸಿ ಗೌರವಿಸಲಾಯಿತು.

## ಜೈಲಲ್ಲಿದ್ದ ಪತಿಗೆ ಗಾಂಜಾ, ಬೀಡಿ, ಸಿಮ್ ಸಾಗಿಸಲು ಯತ್ನ; ಮಹಿಳೆ ಅರೆಸ್ಟ್



ಬೆಂಗಳೂರು: ಒಂದೆಡೆ ಜೈಲಿನ ಅಕ್ರಮಗಳಿಗೆ ಕಡಿವಾಣ ಹಾಕಲು ಶತಪ್ರಯತ್ನಗಳು ನಡೆಯುತ್ತಿದ್ದರೆ ಮತ್ತೊಂದು ಕಡೆ ಜೈಲಿನಲ್ಲಿ ಅಕ್ರಮ ಚಟುವಟಿಕೆಗಳು ನಿಲ್ಲದೇ ಎಗ್ಗಿಲ್ಲದೇ ಸಾಗುತ್ತಿವೆ. ಜೈಲಾಧಿಕಾರಿಗಳ ಕಟ್ಟುನಿಟ್ಟಿನ ಕ್ರಮಕ್ಕೆ ಡೋಂಟ್ ಕೇರ್ ಎನ್ನುತ್ತಾ ಡ್ರಗ್ಸ್, ಗಾಂಜಾ, ಮೊಬೈಲ್ ಮೊದಲಾದ ವಸ್ತುಗಳನ್ನು ಸರಬರಾಜು ಪ್ರಯತ್ನಗಳು ಮುಂದುವರಿಯುತ್ತಲೇ ಇವೆ.

ಈ ಮಧ್ಯೆ, ಪರಪ್ಪನ ಅಗ್ರಹಾರ ಜೈಲಿನಲ್ಲಿ ವಿಚಾರಣಾ ಕೈದಿಯಾಗಿರುವ ಪತಿ ಫರ್ಹಾನ್ ಖಾನ್‌ಗೆ ನೀಡಲು ಮೂರು 5ಜಿ ಸಿಮ್, ಬೀಡಿ ಹಾಗೂ ಗಾಂಜಾ ವಸ್ತುಗಳೊಂದಿಗೆ ಬಂದಿದ್ದ ಮಹಿಳೆ ಸಿಕ್ಕಿಬಿದ್ದು, ಅದೇ ಜೈಲಿಗೆ ಸೇರಿದ್ದಾಳೆ. ರಿತಿಕಾ ರೇ (27) ಬಂಧಿತ ಮಹಿಳೆ.

ಅಸ್ಸಾಂ ಮೂಲದ ರಿತಿಕಾ, ಹೆಣ್ಣೂರಿನ ಫರ್ಹಾನ್ ಖಾನ್‌ನನ್ನ 2ನೇ ಮದುವೆಯಾಗಿದ್ದರು. ಕೆಲ ತಿಂಗಳ ಹಿಂದೆ ಸುಲಿಗೆ ಪ್ರಕರಣದಲ್ಲಿ ಭಾಗಿಯಾಗಿ ಫರ್ಹಾನ್ ಖಾನ್ ಜೈಲು ಸೇರಿದ್ದ. ಮಾ.26 ರಂದು ಗಂಡ ಫರ್ಹಾನ್‌ನನ್ನ ನೋಡಲು ಸಂದರ್ಶನದ ಪಾಸು ಪಡೆದು ರಿತಿಕಾ ಬಂದಿದ್ದಳು. ಜೈಲಿನ ಪ್ರವೇಶ ದ್ವಾರದಲ್ಲಿ ರಿತಿಕಾ ನಡವಳಿಕೆ ಅನುಮಾನಾಸ್ಪದವಾಗಿತ್ತು. ಹೀಗಾಗಿ, ಮಹಿಳಾ ಸಿಬ್ಬಂದಿ ರಿತಿಕಾಳನ್ನ ವಶಕ್ಕೆ ಪಡೆದು ತಪಾಸಣೆ ನಡೆಸಿದ್ದರು. ಈ ವೇಳೆ ರಿತಿಕಾ ತನ್ನ ದೇಹದ ಖಾಸಗಿ ಭಾಗದಲ್ಲಿ ಮೂರು ಸಿಮ್, 27 ಗ್ರಾಂ ಮೆಥಾಂಫೆಟಮೈನ್ ಡ್ರಗ್ಸ್ ಪುಡಿ, ಬೀಡಿ ಹಾಗೂ ತಂಬಾಕು ಉತ್ಪನ್ನವನ್ನ ಕವರ್‌ನಲ್ಲಿ ಬಚ್ಚಿಟ್ಟುಕೊಂಡಿರುವುದು ಕಂಡು ಬಂದಿತ್ತು. ಹೀಗಾಗಿ, ತಕ್ಷಣ ಜೈಲು ಸಿಬ್ಬಂದಿ ವಶಕ್ಕೆ ರಿತಿಕಾಳನ್ನ ಒಪ್ಪಿಸಿದ್ದರು.

ಜೈಲು ಅಧಿಕಾರಿಗಳು ನೀಡಿದ ದೂರಿನನ್ವಯ ಎನ್‌ಡಿಪಿಎಸ್ ಹಾಗೂ ಜೈಲು ನಿಯಮಗಳ ಉಲ್ಲಂಘನೆ ಆರೋಪದನ್ವಯ ಪ್ರಕರಣ ದಾಖಲಿಸಿ ರಿತಿಕಾಳನ್ನ ಪರಪ್ಪನ ಅಗ್ರಹಾರ ಠಾಣೆ ಪೊಲೀಸರು ಬಂಧಿಸಿದ್ದಾರೆ.

## "ಹಸ್ತಾ ಲಾ ವಿಸ್ತಾ"; ಬೀಳ್ಕೊಡುಗೆ ಸಮಾರಂಭ

**<u>ಬೆಳಗಾವಿ ವಾರ್ತೆ ಬೆಳಗಾವಿ:</u>** ಜ್ಯೋತಿ ಸೆಂಟ್ರಲ ಶಾಲೆ, ಬೆಳಗಾವಿ ವತಿಯಿಂದ 2025–26 ಶೈಕ್ಷಣಿಕ ವರ್ಷದ 10ನೇ ತರಗತಿ ವಿದ್ಯಾರ್ಥಿಗಳಿಗಾಗಿ "ಹಸ್ತಾ ಲಾ ವಿಸ್ತಾ" ಎಂಬ ಶೀರ್ಷಿಕೆಯೊಂದಿಗೆ ಬೀಳ್ಕೊಡುಗೆಯ ಸಮಾರಂಭವನ್ನು ಮಾರ್ಚ್ ರಂದು ಸಂಜೆ 4 ಗಂಟೆಗೆ ಅತಿ ಉತ್ಸಾಹ ಮತ್ತು ಭಾವನಾತ್ಮಕ ವಾತಾವರಣದಲ್ಲಿ ಆಯೋಜಿಸಲಾಯಿತು.

ಈ ಸಂದರ್ಭದಲ್ಲಿ ದಕ್ಷಿಣ ಮಹಾರಾಷ್ಟ್ರ ಶಿಕ್ಷಣ ಮಂಡಳಿಯ ಕಾರ್ಯದರ್ಶಿ ವಿಕ್ರಮ ಪಾಟೀಲ, ಅಧ್ಯಕ್ಷ ಶ್ರೀ ಆರ್.ಕೆ. ಪಾಟೀಲ, ಉಪಾಧ್ಯಕ್ಷ ಶ್ರೀ ಆರ್.ಎಸ್. ಪಾಟೀಲ ಹಾಗೂ ಕಾರ್ಯದರ್ಶಿ ಶ್ರೀ ನಿತಿನ ಘೋರಪಡೆ ಉಪಸ್ಥಿತರಿದ್ದರು.

ಈ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಪ್ರಸಿದ್ಧ ವಿಜ್ಞಾನಿ ಹಾಗೂ ಕೆಮಿಕಲ್ ಇಂಜಿನಿಯರಿಂಗ್ ವಿಭಾಗದ ಡೀನ್ ಪ್ರೊ. ಪ್ರವೀಣ ಘೋರಪಡೆ ಉಪಸ್ಥಿತರಿದ್ದರು. ಅವರು ಶಿಕ್ಷಣ ಕ್ಷೇತ್ರದ ಪ್ರತಿಷ್ಠಿತ ವ್ಯಕ್ತಿ. ಕಾರ್ಯಕ್ರಮದ ಆರಂಭ "ಜ್ಯೋತಿ ದಾನ" ಸಮಾರಂಭದಿಂದ ನಡೆಯಿತು. ಇದರಲ್ಲಿ 10ನೇ ತರಗತಿಯ ಎಲ್ಲಾ ಶಿಕ್ಷಕರು ವಿದ್ಯಾರ್ಥಿಗಳ ದೀಪಗಳನ್ನು ಬೆಳಗಿಸಿದರು. ನಂತರ ಶ್ರೀಮತಿ ಸೌದಾಮಿನಿ ಸಾವಂತ ಅವರು ಶಪಥವನ್ನು ಬೋಧಿಸಿದರು.

ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀಮತಿ ಸೋನಾಲಿ ಕಂಗ್ರಾಳ್ಕರ ಅವರು ಮುಖ್ಯ ಅತಿಥಿಯನ್ನು ಪುಷ್ಪಗುಚ್ಛ ನೀಡಿ ಸ್ವಾಗತಿಸಿದರು.

ಪ್ರೊ. ಪ್ರವೀಣ ಘೋರಪಡೆ ಅವರ ಪ್ರೇರಣಾದಾಯಕ ಭಾಷಣವು ಅವರ ಯಶಸ್ವಿ ಜೀವನಯಾನದ ಕುರಿತು ವಿವರಿಸಿದ್ದು, ಅದು ವಿದ್ಯಾರ್ಥಿಗಳಿಗೆ ಮಾರ್ಗದರ್ಶಕವಾಗಿತ್ತು.




ಶಾಲೆಯ ವತಿಯಿಂದ ಪ್ರತಿಯೊಬ್ಬ ವಿದ್ಯಾರ್ಥಿಗೆ ಸ್ಮರಣಾರ್ಥವಾಗಿ ಸ್ಮೃತಿ ಚಿಹ್ನೆಗಳನ್ನು ನೀಡಲಾಯಿತು. ಈ ಸಂದರ್ಭದಲ್ಲಿ ಮುಖ್ಯೋಪಾಧ್ಯಾಯರು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

ಶಾಲೆಯ ಅವಿಸ್ಮರಣೀಯ ಕ್ಷಣಗಳನ್ನು ಪರದೆಯ ಮೇಲೆ ಪ್ರದರ್ಶಿಸಲಾಯಿತು, ಇದರಿಂದ ಎಲ್ಲರೂ ಭಾವುಕರಾದರು. ಕಾರ್ಯಕ್ರಮದ ನಿರ್ವಹಣೆಯನ್ನು ಶಿಕ್ಷಕಿಯರಾದ ಕಿರಣ ಮತ್ತು ಶಾಂತಾ ಮ್ಯಾಡಮ ನಿರ್ವಹಿಸಿದರು.

ಕೊನೆಯಲ್ಲಿ ಕ್ರೀಡೆಗಳು ಮತ್ತು ಮನರಂಜನಾ ಚಟುವಟಿಕೆಗಳೊಂದಿಗೆ ಕಾರ್ಯಕ್ರಮ ಸಮಾಪ್ತಿಗೊಂಡಿತು.

## ಮುಂಬೈಯಲ್ಲಿ ಕನ್ನಡ ಕಲರವ: ಮೀನಾಕ್ಷಿ ಸೂಡಿ



**<u>ಬೆಳಗಾವಿ ವಾರ್ತೆ ಚನ್ನಮ್ಮನ ಕಿತ್ತೂರು:</u>** "ಕರ್ನಾಟಕದಾಚೆಗೂ ಕನ್ನಡ ನುಡಿ ಕೇಳಿ ನಾನು ಭಾವುಕಳದೆ. ಮುಂಬೈಯಲ್ಲಿ ಕನ್ನಡ ಸಂಘಗಳು ಕನ್ನಡ ಕಟ್ಟುವ ಕೆಲಸವನ್ನು ಅತ್ಯುತ್ತಮವಾಗಿ ಮಾಡುತ್ತಿವೆ" ಎಂದು ಲೇಖಕಿ,ಶಿಕ್ಷಕಿ ಮೀನಾಕ್ಷಿ ಸೂಡಿಯವರು ಹೇಳಿದರು.ಅವರು ರಂದು ಮುಂಬೈಯಲ್ಲಿ ನಡೆದ ಮೈಸೂರ್ ಅಸೋಸಿಯೇಷನ್ ಮುಂಬೈ ಇದರ 100 ನೇ ವರ್ಷಾಚರಣೆಯಲ್ಲಿ ತಮ್ಮ ಶಿಶುಕವನಕ್ಕೆ ಉತ್ತಮ ನಗದು ಪುರಸ್ಕಾರ ಪಡೆದು ಮಾತನಾಡಿದರು.

ಕನ್ನಡವನ್ನು ಕನ್ನಡಿಗರಲ್ಲದೆ ಇತರೇ ಭಾಷಿಕರು ಬಳಸಿ ಬೆಳೆಸುವಂತ ಸೌಹಾರ್ದಯುತ ವಾತಾವರಣ ನಿರ್ಮಾಣವಾಗಬೇಕು.ಹಾಗೂ ಹೊರನಾಡಿನ ಕನ್ನಡಿಗರು ಈ ಭಾಷೆಯನ್ನು ಸಮರ್ಥವಾಗಿ ಬಳಸಿ ಬೆಳೆಸಬೇಕು ಎಂದು ಸಲಹೆ ನೀಡಿದರು.

ಮುಂಬೈ ಅಸೋಸಿಯೇಷನ್ ರವರು ನಿರಂತರವಾಗಿ 100 ವರ್ಷಗಳ ಕಾಲ ಕನ್ನಡ ಭಾಷಾಭಿವೃದ್ಧಿಗೆ ಹಮ್ಮಿಕೊಂಡ ಕಾರ್ಯ ಚಟುವಟಿಕೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಸಂಘದ ಸರ್ವ ಪಧಾಧಿಕಾರಿಗಳಿಗೆ ವಂದನೆಗಳನ್ನು ತಿಳಿಸಿದರು.

# ಸಹಕಾರ ಕ್ಷೇತ್ರವು ಜನಸೇವೆಗಾಗಿ ಇದೆ; ಇದು ಜನರ ಆರ್ಥಿಕ ಮತ್ತು ಸಾಮಾಜಿಕ ಸಬಲೀಕರಣಕ್ಕಾಗಿ ಇರುವ ಒಂದು ಅದ್ಭುತ ವೇದಿಕೆ



**ಬೆಳಗಾವಿ ವಾರ್ತೆ ಧಾರವಾಡ:** ಸಹಕಾರ ಕ್ಷೇತ್ರವು ಜನಸೇವೆಗಾಗಿ ಇದೆ. ಕೇವಲ ಲಾಭಕ್ಕಾಗಿ ಸಂಸ್ಥೆಯು ಕೆಲಸ ಮಾಡುವುದಿಲ್ಲ, ಬದಲಿಗೆ ಅದು ಜನರ ಆರ್ಥಿಕ ಮತ್ತು ಸಾಮಾಜಿಕ ಸಬಲೀಕರಣಕ್ಕಾಗಿ ಇರುವ ಒಂದು ಅದ್ಭುತ ವೇದಿಕೆ ಎಂದು ಸಂಶಿ ಅರ್ಬನ್ ಕೋ ಆಪರೇಟಿವ್ ಕ್ರೆಡಿಟ್ ಸೋಸಾಯಿಟಿ ಅಧ್ಯಕ್ಷ ಎ.ಬಿ.ಉಪ್ಪಿನ ತಿಳಿಸಿದರು.

ಧಾರವಾಡ ರಂಗಾಯಣದ ಸುವರ್ಣ ಸಾಂಸ್ಕೃತಿಕ ಸಮುಚ್ಚಯ ಸಭಾಭವನದಲ್ಲಿ ಶ್ರೀ ಮೃತ್ಯುಂಜಯ ಅರ್ಬನ್ ಕೋ ಆಪರೇಟಿವ್ ಕ್ರೆಡಿಟ್ ಸೋಸಾಯಿಟಿ ನಿ., ಧಾರವಾಡ, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ, ಬೆಂಗಳೂರು ಹಾಗೂ ಧಾರವಾಡ ಜಿಲ್ಲಾ ಸಹಕಾರ ಯೂನಿಯನ್ ಸಂಯುಕ್ತ ಆಶ್ರಯದಲ್ಲಿ ನಡೆದ ಆಡಳಿತ ಮಂಡಳಿ, ಸಿಬ್ಬಂದಿ, ಗ್ರಾಹಕರು ಹಾಗೂ ಸದಸ್ಯರ ನಡುವಿನ ಬಾಂಧವ್ಯದ ಕುರಿತು ಕ್ಲಸ್ಟರ್ ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಮಾಜದ ಕೆಳಹಂತದ ಜನರಿಗೆ, ಅದರಲ್ಲೂ ರೈತರಿಗೆ ಮತ್ತು ಸಣ್ಣ ಉದ್ಯಮಿಗಳಿಗೆ ಸುಲಭವಾಗಿ ಸಾಲ ಸೌಲಭ್ಯ ಒದಗಿಸುವ ಮೂಲಕ ಅವರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡುತ್ತದೆ. ಸಹಕಾರ ಕ್ಷೇತ್ರವು ಹಳ್ಳಿಗಳ ಜೀವನ ಮಟ್ಟವನ್ನು ಸುಧಾರಿಸಲು ಮತ್ತು ಸ್ವಾವಲಂಬಿ ಬದುಕನ್ನು ನಿರ್ಮಿಸಲು ನಿರಂತರ ಪ್ರಯತ್ನ ನಡೆಯುತ್ತಿದೆ ಎಂದು ತಿಳಿಸಿದರು.

ಸಹಕಾರ ಸಂಸ್ಥೆಗಳು ಜಾತಿ, ಪಕ್ಷ ಮತ್ತು ಧರ್ಮ ರಹಿತವಾಗಿ, ಸದಸ್ಯರ ಕಲ್ಯಾಣಕ್ಕಾಗಿ ಕಾರ್ಯನಿರ್ವಹಿಸಬೇಕು. ಸಹಕಾರ ಕ್ಷೇತ್ರದ ಕುರಿತು ಯುವಕರು ಹೆಚ್ಚಾಗಿ ತಿಳುವಳಿಕೆ ಹೊಂದಬೇಕು ಎಂದು ಕರೆ ನೀಡಿದರು.

ಕರ್ನಾಟಕ ರಾಜ್ಯ ಸಹಕಾರ ಮಹಾ ಮಂಡಳ ನಿರ್ದೇಶಕ ಬಾಪುಗೌಡ ಪಾಟೀಲ, ಕೆ.ಸಿ.ಸಿ ಬ್ಯಾಂಕ್ ಪ್ರಧಾನ ವ್ಯವಸ್ಥಾಪಕ ಶಿವಾನಂದ ಹೂಗಾರ, ಅಧ್ಯಕ್ಷತೆ ವಹಿಸಿದ್ದ ಶ್ರೀ ಮೃತ್ಯುಂಜಯ ಅರ್ಬನ್ ಕೋ ಆಪರೇಟಿವ್ ಸೋಸಾಯಿಟಿ ಅಧ್ಯಕ್ಷ ಕಳಕಪ್ಪ ಎಚ್ ಗುರಿಕಾರ ಮಾತನಾಡಿದರು.

ಕಾರ್ಯಕ್ರಮದಲ್ಲಿ ಮಹಾದೇವಿ ಕಬ್ಬೂರ, ಬಸವರಾಜ ಕಪಲಿ, ಈಶ್ವರಗೌಡ ಪಾಟೀಲ, ಅರವಿಂದ ಕಪಲಿ, ಲಕ್ಷ್ಮಣ ಕಬ್ಬೂರ, ಜಗದೀಶ ಹೋಳೆಯಣ್ಣವರ, ಮಾರ್ಕಂಡೇಯ ದೊಡ್ಡಮನಿ, ಬಸವಣ್ಣೆಪ್ಪ ಶಿವಳ್ಳಿ, ಪಾರ್ವತಿ ಹಾಲಭಾವಿ, ಜ್ಯೋತಿ ಭಾವಿಕಟ್ಟಿ, ರಾಜಕುಮಾರ ಕೊಟ್ಟೂರಶೆಟ್ಟರ, ಗದಿಗೆಪ್ಪ ಜಕ್ಕಣ್ಣವರ, ಕಾನೂನು ಸಲಹೆಗಾರ ಶಿವಾನಂದ ಭಾವಿಕಟ್ಟಿ, ಕಿರಣ್.ಎ., ಅನಿತಾ ಸುರೇಬಾನ, ಬಸವರಾಜ ಮೇಟಿ, ಮೇಘರಾಜ ಹದ್ಲಿ ಇತರರಿದ್ದರು.

# ವಿಶ್ವ ಮಹಿಳಾ ದಿನಾಚರಣೆ & ಬೀಳ್ಕೊಡುವ ಸಮಾರಂಭ



**ಬೆಳಗಾವಿ ವಾರ್ತೆ ಧಾರವಾಡ** ಕರ್ನಾಟಕ ರಾಜ್ಯ ಸರಕಾರಿ ಪ್ರಯೋಶಾಲಾ ತಾಂತ್ರಿಕ ಅಧಿಕಾರಿಗಳ ಸಂಘ ಧಾರವಾಡ ಜಿಲ್ಲಾ ಮಟ್ಟದ ವಿಚಾರ ಸಂಕೀರ್ಣ ವಿಶ್ವ ಮಹಿಳಾ ದಿನಾಚರಣೆ ಹಾಗೂ ಬಿಳ್ಕೊಡುವ ಸಮಾರಂಭವನ್ನು ಆಯೋಜನೆ ಮಾಡಲಾಗಿತ್ತು

ಈ ಕಾರ್ಯಕ್ರಮಕ್ಕೆ ಉದ್ಘಾಟಕರಾಗಿ ಆಗಮಿಸಿದಂತ ಡಾಕ್ಟರ್ ಪುಷ್ಪಾ ಎಸ್ ಆರ್ ವಿಭಾಗಿಯ ಸಹ ನಿರ್ದೇಶಕರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಬೆಳಗಾವಿ ವಿಭಾಗ ಬೆಳಗಾವಿ ಇವರು ಇಲಾಖೆಯ ನೌಕರರ ಮೇಲೆ ಕೆಲಸದ ಒತ್ತಡ ಬಹಳಷ್ಟು ಇದು ರಜೆ ದಿನಗಳಲ್ಲೂ ಕೂಡ ಕಾರ್ಯನಿರ್ವಹಿಸುವಂತಹ ತಿಥಿ ನಿರ್ಮಾಣದಿಂದ ನೌಕರರು ಒಳಗಾಗುತ್ತಿದ್ದಾರೆ ಇಂತಹ ಕಾರ್ಯಕ್ರಮ ಮನೋರಂಜನೆಗಳು ಮನಸ್ಸಿಗೆ ನೆಮ್ಮದಿ ಸಿಕ್ಕು ಪುನರ್ ಚೇತನ ವಾಗುತ್ತದೆ ಎಂದು ಶ್ಲಾಗಿಸಿದರು.

ವಿಶೇಷ ಅತಿಥಿಗಳಾಗಿ ಎಸ್ಎಫ್ ಸಿದ್ದನಗೌಡರ ಜಿಲ್ಲಾಧ್ಯಕ್ಷರು ಹಾಗೂ ರಾಜ್ಯ ಉಪಾಧ್ಯಕ್ಷರು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಧಾರವಾಡ ಇವರು ಆರೋಗ್ಯ ಇಲಾಖೆಯ ಕಾರ್ಯ ವ್ಯಾಪ್ತಿ ಹಾಗೂ ಜವಾಬ್ದಾರಿ ಅಗಾಧವಾಗಿದ್ದು ನೌಕರರ ಜವಾಬ್ದಾರಿಯುತ ಕಾರ್ಯರೂಪವೇಶಗಳಿಂದ ಧಾರವಾಡ ಆರೋಗ್ಯ ಕ್ಷೇತ್ರದಲ್ಲಿ ರಾಜ್ಯದಲ್ಲಿ

ಗಣನಿಯ ಸಾಧನೆ ಸಾಧಿಸಿದೆ ಎಂದು ಪ್ರಸೌಂಶಿಸಿ ಮಹಿಳೆಯರನ್ನು ಅಭಿನಂದಿಸಿದರು.

ಡಾಕ್ಟರ್ ಎಸ್ ಎಂ ಹೊನಕೇರಿ ಮಾನ್ಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಧಾರವಾಡ ಇವರು ಪ್ರಯೋಶಾಲ ತಾಂತ್ರಿಕ ಅಧಿಕಾರಿಗಳು ಇಲಾಖೆಗೆ ಪ್ರಮುಖ ಅಂಗವಾಗಿದ್ದು ಪರೀಕ್ಷೆ ಹಾಗೂ ಪರಿಣಾಮದ ಆಧಾರದ ಮೇಲೆಯೇ ರೋಗದ ಮೇಲಿನ ನಿಯಂತ್ರಣ ಸಮೀಕ್ಷಣೆಯಿಂದ ರೋಗದ ತೀವ್ರತೆಯನ್ನು ಅಳಿಯಲು ಸಾಧ್ಯ ಎಂದು ಅಭಿಪ್ರಾಯ ಪಟ್ಟರು.

ಈ ಕಾರ್ಯಕ್ರಮದಲ್ಲಿ ಡಾಕ್ಟರ್ ಮಂಜುನಾಥ್ ಎಸ್ ಜಿಲ್ಲಾ ಯೋಜನಾ ಅಭಿವೃದ್ಧಿ ಅಧಿಕಾರಿಗಳು ಡಾಕ್ಟರ್ ರವೀಂದ್ರ ಭವ್ಯರ್ ಜಿಲ್ಲಾ ಶಿರೋಗ ನಿಯಂತ್ರಣ ಅಧಿಕಾರಿಗಳು ಹಾಗೂ ಕುಷ್ಟರೋಗ ನಿಯಂತ್ರಣಧಿಕಾರಿಗಳು ಧಾರವಾಡ ಡಾಕ್ಟರ್ ಎಸ್ ಬಿ ಕಳಸೂರು ಮತ ಎನ್ ಸಿ ಡಿ ಕಾರ್ಯಕ್ರಮ ಅಧಿಕಾರಿಗಳು ಡಾಕ್ಟರ್ ತನುಜ ಕೆಎನ್ ತಾಲೂಕ ಆರೋಗ್ಯ ಅಧಿಕಾರಿಗಳು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದದ್ದರು.ಶ್ರೀದೇವಿದಾಸ ಶಾಂತಿಕರ್ ಅಧ್ಯಕ್ಷರು ಕರ್ನಾಟಕ ರಾಜ್ಯ ಸರ್ಕಾರಿ ಪ್ರಯೋಗಶಾಲ ತಾಂತ್ರಿಕ ಅಧಿಕಾರಿಗಳ ಸಂಘ ಧಾರವಾಡ ಇವರು ಗುಣಮಟ್ಟದ ರಾಸಾಯನಿಕಗಳನ್ನು ಪೂರೈಸಲು ಮನವಿ ಮಾಡಿಕೊಂಡರು ಹಾಗೂ ಮಹಿಳೆಯರನ್ನು ಮಹಿಳಾ ದಿನಾ ಚರಣೆಯ ಶುಭಾಶಯಗಳು ಕೋರಿದರು ಜಿಲ್ಲಾ ಸಂಘದ ಕಾರ್ಯದರ್ಶಿಯಾದ ಆರ್ ಎಂ ಛಬ್ಬಿ ನಿರೂಪಣೆಯನ್ನು ನೆರವೇ ರಿಸಿದರು ಎಂದು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ,

# ಮಹಾವೀರರ ತತ್ವ ಅರಿತರೆ ಜಗವೆಲ್ಲ ಶಾಂತಿಯ ಸ್ವತ್ತು: ಸಂತೋಷ ಬಂಡೆ

**ಬೆಳಗಾವಿ ವಾರ್ತೆ ವಿಜಯಪುರ:** ಭಗವಾನ್ ಮಹಾವೀರರು ಮಾನವನ ಸುಂದರ ಬದುಕಿಗೆ ಬೇಕಾದ ಐದು ತತ್ವಗಳನ್ನು ತಿಳಿಸಿದ್ದು, ಅವನ್ನು ಅಳವಡಿಸಿಕೊಂಡರೆ ಇಡೀ ವಿಶ್ವವೇ ನೆಮ್ಮದಿಯ ಜೀವನ ನಡೆಸಲು ಸಾಧ್ಯ ಎಂದು ಶಿಕ್ಷಕ ಸಂತೋಷ ಬಂಡೆ ಹೇಳಿದರು.

ಇಂಡಿ ತಾಲೂಕಿನ ಹಿರೇರೂಗಿ ಗ್ರಾಮದ ಯುಬಿಎಸ್ ಶಾಲೆಯಲ್ಲಿ ಹಮ್ಮಿಕೊಂಡ ವರ್ಧಮಾನ ಮಹಾವೀರರ ಜಯಂತಿ ಆಚರಣೆಯಲ್ಲಿ, ಮಹಾವೀರರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಅವರು ಮಾತನಾಡಿದರು.

ಮಹಾವೀರರ ಬೋಧನೆಯೇ ನಮಗೆಲ್ಲ ಸ್ಫೂರ್ತಿ. ಪ್ರತಿ ಜೀವಿಗೂ ಕೂಡ ಜೀವನದ ಮೌಲ್ಯಗಳನ್ನು ಬೋಧಿಸುತ್ತಾ,



ಪ್ರೀತಿ ಸಾಮರಸ್ಯದಿಂದ ಬಾಳಿದರೆ ಸಮಾಜದಲ್ಲಿ ಶಾಂತಿ ನೆಲೆಸುತ್ತದೆ. ಸರಳತೆ, ವಿನಯಶೀಲತೆಯೇ ಬದುಕಿಗೆ ಶ್ರೀರಕ್ಷೆ ಎಂಬ ಅವರ ತತ್ವಾದರ್ಶ ಇಂದಿನ ಬದುಕಿಗೆ ಪ್ರಸ್ತುತ. ಅವರ ತತ್ವ ಅರಿತರೆ ಜಗವೆಲ್ಲ ಶಾಂತಿಯ ಸ್ವತ್ತು ಎಂದು ಹೇಳಿದರು.

ಸುಳ್ಳು, ಕಳ್ಳತನಕ್ಕೆ ಅವಕಾಶವಿಲ್ಲದೆ, ಸರಿ ಮಾರ್ಗದಲ್ಲಿ, ಅಗತ್ಯಕ್ಕೆ ತಕ್ಕಷ್ಟು ಸಂಪತ್ತು ಸಂಗ್ರಹಿಸಿದಾಗ ಅದು ನೆಮ್ಮದಿಯ ಜೀವನಕ್ಕೆ ದಾರಿಯಾಗುತ್ತದೆ. ನೀನು ಬದುಕು, ಇತರರನ್ನು ಬದುಕಲು ಬಿಡು ಎಂಬ ಮಹಾವೀರರ ತತ್ವದಡಿಯಲ್ಲಿ ನಾವೆಲ್ಲರೂ ಸಾಗಬೇಕಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಮುಖ್ಯ ಶಿಕ್ಷಕ ಕೆ.ಐ. ಮಕಾನದಾರ ಮಾತನಾಡಿ, ಜೀವನದ ಸಂತೋಷ, ವಿಶ್ವಶಾಂತಿ ಮತ್ತು ಸಮಸ್ತ ಮಾನವ ಕಲ್ಯಾಣಕ್ಕಾಗಿ ಮಹಾವಿ?ರರ ಬೋಧನೆಗಳನ್ನು ಅರ್ಥೈಸಿಕೊಂಡು, ಅನುಸರಿಸಬೇಕು. ಅವರ ತತ್ವಗಳು ವಿಶ್ವಮಾನ್ಯವಾಗಿದ್ದು, ಸಾರ್ವಕಾಲಿಕ ಮೌಲ್ಯ ಹೊಂದಿವೆ ಎಂದು ಹೇಳಿದರು.

ಶಿಕ್ಷಕರಾದ ಎಸ್.ಎಸ್. ಅರಬ, ಎನ್.ಬಿ. ಚೌಧರಿ, ಎಸ್.ಪಿ. ಪೂಜಾರಿ ಸೇರಿದಂತೆ ಮಕ್ಕಳು ಪಾಲ್ಗೊಂಡಿದ್ದರು.

# ಕ್ಷೇತ್ರದಲ್ಲಿ ಶಿಕ್ಷಣ ನೀರಾವರಿ ವಿದ್ಯುತ್ ಆರೋಗ್ಯ- ಮೂಲ ಸೌಕರ್ಯಗಳ ಅಭಿವೃದ್ಧಿಗೆ ಆದ್ಯತೆ : ಶಾಸಕ ಲಕ್ಷ್ಮಣ ಸವದಿ



ಅಥಣಿಯ ಶೈಕ್ಷಣಿಕ ಇತಿಹಾಸದಲ್ಲಿ ಇದೊಂದು ಮೈಲಿಗಲ್ಲು ಆಗಲಿದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಜೆಟ್‌ನಲ್ಲಿ ಅಥಣಿ ಕೃಷಿ ಕಾಲೇಜಿಗೆ 508 ಕೋಟಿ ರೂ. ಮಂಜೂರಾತಿ ನೀಡಿದ್ದಾರೆ. ಕೊಟ್ಟಲಗಿ ಅಮ್ಮಾಜೇಶ್ವರಿ ಯೋಜನೆ ಉದ್ಘಾಟನೆಗೆ ಮುಖ್ಯಮಂತ್ರಿಗಳು ಆಗಮಿಸಿದಾಗ ಕೃಷಿ ಕಾಲೇಜು ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಲಿದ್ದಾರೆ. ಅಥಣಿ ಪಟ್ಟಣವನ್ನು ತಂತಿ ಮುಕ್ತ ಮಾಡಲಾಗುವುದು. ಯುಜಿಡಿ ಮಾಡಲಿಕ್ಕೆ 440 ಕೋಟಿ ರೂಗಳ ಪ್ರಸ್ತಾವನೆ ಕೊಟ್ಟಿದ್ದೇನೆ. ರೈತರಿಗೆ ಬೇಡಿದಾಗ ನೀರು ಬೇಡಿದಾಗ ಕರೆಂಟ್ ಕೊಟ್ಟರೆ ಆಧುನಿಕ ಕೃಷಿ ಮಾಡಲು ಸಾಧ್ಯ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ಅನುಕೂಲ ಆಗುವ ನಿಟ್ಟಿನಲ್ಲಿ ತೋಟದ ವಸತಿಗಳಿಗೆ 24 ಗಂಟೆ ವಿದ್ಯುತ್ ನೀಡುವ ನಿರಂತರ ಜೊತಿ ಯೋಜನೆಗೆ ಚಾಲನೆ ನೀಡಲಾಗಿದೆ

**ಲಕ್ಷ್ಮಣ ಸವದಿ.**
**ಶಾಸಕರು**

**ಬೆಳಗಾವಿ ವಾರ್ತೆ ಅಥಣಿ:** ಗ್ರಾಮೀಣ ಹಾಗೂ ನಗರ ಪ್ರದೇಶಗಳ ಸರ್ವತೋಮುಖ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದ್ದು, ಜನರ ಸಮಸ್ಯೆಗಳನ್ನು ಹತ್ತಿರದಿಂದ ಅರಿತು ಅವುಗಳಿಗೆ ಶಾಶ್ವತ ಪರಿಹಾರ ಕಲ್ಪಿಸುವುದು ನಮ್ಮ ಗುರಿಯಾಗಿದೆ. ಜನರ ವಿಶ್ವಾಸಕ್ಕೆ ತಕ್ಕಂತೆ ಕೆಲಸ ಮಾಡುವ ಸಂಕಲ್ಪದೊಂದಿಗೆ, ಎಲ್ಲ ವರ್ಗದ ಜನತೆಗೆ ಮೂಲಭೂತ ಸೌಲಭ್ಯಗಳನ್ನು ತಲುಪಿಸಲು ಪ್ರಾಮಾಣಿಕ ಪ್ರಯತ್ನ ಮಾಡುವದಾಗಿ ಶಾಸಕ ಲಕ್ಷ್ಮಣ ಸವದಿ ಹೇಳಿದರು

ಅಥಣಿ ತಾಲೂಕಿನಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಮುಖ್ಯಮಂತ್ರಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಯೋಜನೆಯಡಿ 6.85 ಕೋಟಿ ರೂ.ಗಳ ಕಾಮಗಾರಿಗಳಾದ ಅಬ್ಬಿಹಾಳ ರಸ್ತೆ ಸುಧಾರಣೆಗೆ 3.60 ಕೋಟಿ, ದರೂರ ಖವಟಕೊಪ್ಪ ರಸ್ತೆ ಕಾಮಗಾರಿಗೆ 3 ಕೋಟಿ ಮತ್ತು ದರೂರ ಗ್ರಾಮದ ಬನ್ನಿವಾರಿ ತೋಟದ ವಸತಿಗೆ ನಿರಂತರ ವಿದ್ಯುತ್ ಯೋಜನೆಗೆ 25 ಲಕ್ಷ ರೂ.ಗಳ ಕಾಮಗಾರಿಗಳಿಗೆ ಸೋಮವಾರ ಶಾಸಕ ಲಕ್ಷ್ಮಣ ಸವದಿ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು ಅವರು ಮುಂದಿನ 25 ವರ್ಷಗಳ ಅವಧಿಗೆ ಬೇಕಾಗುವ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಯೋಜನೆಗಳನ್ನು ರೂಪಿಸಲಾಗಿದ್ದು, ಅಥಣಿ ತಾಲೂಕಿನ ಸವದಿ, ಯಲ್ಲಡಗಿ, ಸಂಕೋನಟ್ಟಿ, ಪಾರ್ಥನಹಳ್ಳಿ ಹತ್ತಿರ ಮತ್ತು ತೆಲಸಂಗ ಗ್ರಾಮಗಳಲ್ಲಿ 110 ಕಿಲೋ ವ್ಯಾಟ್ ಸ್ಟೇಶನ್ ಗಳು ಮಂಜೂರಾಗಿದ್ದು, ಈಗಾಗಲೇ ಯಲ್ಲಡಗಿ ಗ್ರಾಮದಲ್ಲಿ 110 ಕಿಲೋ ವ್ಯಾಟ್ ಸ್ಟೇಶನ್ ಕಾಮಗಾರಿ ಪ್ರಾರಂಭವಾಗಿದ್ದು, ಈ ಎಲ್ಲ ಸ್ಟೇಶನ್‌ಗಳ ಪೂರ್ಣಗೊಳ್ಳುವುದರಿಂದ ವಿದ್ಯುತ್ ಸಮಸ್ಯೆ ಶಾಶ್ವತವಾಗಿ ಪರಿಹಾರಗೊಳ್ಳಲಿದೆ.

ಅಂದಾಜು 3 ಲಕ್ಷ 50 ಸಾವಿರ ಎಕರೆಗೆ ಮತ್ತು 25 ಲಕ್ಷ ಜನ–ಜಾನುವಾರುಗಳಿಗೆ ಕುಡಿಯುವ ನೀರು ಒದಗಿಸುವ ಹಿಪ್ಪರಗಿ ಆಣೆಕಟ್ಟಿನ ಗೇಟ್ ಕಿತ್ತು ಹೋದ ಪರಿಣಾಮ ಸುಮಾರು 3 ಟಿ.ಎಂ.ಸಿ ನೀರು ಹರಿದು ಹೋಗಿತ್ತು ಹೀಗಾಗಿ ಬೇಸಿಗೆಯಲ್ಲಿ ನೀರಿನ ಕೊರತೆಯಾಗುತ್ತದೆ ಎಂದು ಎಲ್ಲರೂ ಆತಂಕಕ್ಕೀಡಾಗಿದ್ದರು ಆದರೆ ಸದ್ಯದ ಸ್ಥಿತಿ ಗಮನಿಸಿದಲ್ಲಿ ನೀರಿನ ಕೊರತೆ ಉಂಟಾಗುವುದಿಲ್ಲ, ಯಾರೂ ಅತಂಕ ಪಡುವ ಅವಶ್ಯಕತೆ ಇಲ್ಲ ಎಂದು ಹೇಳಿದರು.

ಈ ಸಂದರ್ಭದಲ್ಲಿ ಹೆಸ್ಕಾಂ ಅಧಿಕಾರಿಗಳಾದ ಗುರುರಾಜ ಸಂಪಣ್ಣವರ, ಎಸ್.ಎ. ಪಾರ್ಥನಹಳ್ಳಿ, ಎಮ್. ಎಸ್.ಅವಟಿ, ಲೋಕೋಪಯೋಗಿ ಇಲಾಖೆ ಅಧಿಕಾರಿ ಮಲ್ಲಿಕಾರ್ಜುನ ಮಗದುಮ್, ಗುತ್ತಿಗೆದಾರರಾದ ರಾಜು ಆಲಬಾಳ, ಅರ್ಜುನ ನಾಯಿಕ, ಅಮೀರ ಖತೀಬ್, ಶಿವರುದ್ರ ಘೂಳಪ್ಪನವರ, ಮುಖಂಡರಾದ ವಿನಾಯಕ ಬಾಗಡಿ. ಸುರೇಶ ಮಾಯಣ್ಣವರ. ಶೇಖರ ಕನಕರೆಡ್ಡಿ. ಮಲ್ಲಿಕಾರ್ಜುನ ದಳವಾಯಿ, ಶಿವು ಆಸಂಗಿ, ರಾಜು ಮರಡಿ, ಶಿವಾನಂದ ನಾಯಿಕ, ಶಿವಪುತ್ರ ನಾಯಿಕ, ಮಹಾಂತೇಶ ಐಗಳಿಮಠ, ಪುಟ್ಟು ಶಿಂಧೆ, ಸುರೇಶ ಮಾಯಣ್ಣವರ, ವಿನಾಯಕ ಬಾಗಡಿ, ನಾಥಗೌಡ ಪಾಟೀಲ,ಅಣ್ಣಪ್ಪ ಚೌಗಲಾ, ಜಗದೀಶ ದಳವಾಯಿ,ಬಾಳಪ್ಪ ಗುಮತಾಜ, ಮಲ್ಲಿಕಾರ್ಜುನ ದಳವಾಯಿ, ಸೇರಿದಂತೆಸೇರಿದಂತೆ ಹಲವು ಗಣ್ಯರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

## ಪೆಟ್ರೋಲ್ ವದಂತಿ ನಂಬಿ ಕ್ಯಾನ್ ಫುಲ್; ಧಗಧಗ ಹೊತ್ತಿ ಉರಿದ ಇಡೀ ಮನೆ! ಗಂಭೀರ ಸ್ಥಿತಿಯಲ್ಲಿ ಗೃಹಿಣಿ



ಧಾರವಾಡ: ತಾಲೂಕಿನ ತಡಕೋಡ ಗ್ರಾಮದ ಹರಿಜನಕೇರಿ ಓಣಿಯಲ್ಲಿ ಸೋಮವಾರ ರಾತ್ರಿ ಭೀಕರ ಅಗ್ನಿ ಅವಘಡ ಸಂಭವಿಸಿದೆ. ಮನೆಯಲ್ಲಿ ಸಂಗ್ರಹ ಮಾಡಿದ್ದ ಪೆಟ್ರೋಲ್ ಕ್ಯಾನ್‌ಗೆ ಬೆಂಕಿ ತಗುಲಿ ಸ್ಫೋಟಗೊಂಡ ಪರಿಣಾಮ ಗೃಹಿಣಿಯೊಬ್ಬರು ತೀವ್ರವಾಗಿ ಗಾಯಗೊಂಡಿದ್ದಾರೆ. ಪೂರ್ಣಿಮಾ ಕಲ್ಲಪ್ಪ ಹಾದಿಮನಿ (32) ಎಂಬವರು ಘಟನೆಯಲ್ಲಿ ಶೇ.80ರಷ್ಟು ದೇಹ ಸುಟ್ಟಿದ್ದು, ಅವರ ಸ್ಥಿತಿ ಚಿಂತಾಜನಕವಾಗಿದೆ. ಅವರಿಗೆ ಮೊದಲು ಜಿಲ್ಲಾಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿ, ಬಳಿಕ ಹೆಚ್ಚಿನ ಚಿಕಿತ್ಸೆಗೆ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಪೆಟ್ರೋಲ್ ಅಭಾವ ಇದೆ ಎಂಬ ವದಂತಿ ಹಿನ್ನೆಲೆ ಮನೆಯಲ್ಲಿ ಕ್ಯಾನ್‌ನಲ್ಲಿ ಪೆಟ್ರೋಲ್ ಸಂಗ್ರಹಿಸಿ ಫ್ರಿಡ್ಜ್ ಬಳಿ ಇಡಲಾಗಿತ್ತು. ಪೂರ್ಣಿಮಾ ಅಡುಗೆ ಮನೆಯಲ್ಲಿ ಇದ್ದಾಗ ಏಕಾಏಕಿ ಪೆಟ್ರೋಲ್ ಕ್ಯಾನ್‌ಗೆ ಬೆಂಕಿ ತಗುಲಿ ಸ್ಫೋಟಗೊಂಡು, ಕ್ಷಣಾರ್ಧದಲ್ಲಿ ಮನೆಗೆ ಬೆಂಕಿ ವ್ಯಾಪಿಸಿದೆ. ಅಡುಗೆ ಮನೆಯಲ್ಲಿ ಸಿಲುಕಿದ್ದ ಅತ್ತಿಗೆಯನ್ನು ಮೈದುನ ಯಲ್ಲಪ್ಪ ರಕ್ಷಿಸಿದ್ದು, ಈ ವೇಳೆ ಯಲ್ಲಪ್ಪನಿಗೂ ಗಾಯಗಳಾಗಿವೆ. ಮನೆಯ ಇತರೆ ಸದಸ್ಯರು ಹೊರಗಡೆ ಇದ್ದ ಕಾರಣ ಅಪಾಯದಿಂದ ಪಾರಾಗಿದ್ದಾರೆ. ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ಬೆಂಕಿ ನಂದಿಸಿದ್ದಾರೆ. ಮದುವೆ ಕಾರ್ಯಕ್ರಮಗಳಿಗೆ ರಥ ಓಡಿಸಲು ಪೆಟ್ರೋಲ್ ಸಂಗ್ರಹಿಸಲಾಗಿತ್ತು ಎಂದು ತಿಳಿದು ಬಂದಿದೆ. ಗರಗ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದ್ದಾರೆ.

# ಶ್ರೀ ಶರಣಬಸವ ಚೋಳಿನ ಸೇವಾ ನಿವೃತ್ತಿ; ಬೀಳ್ಕೊಡುಗೆ



**ಬೆಳಗಾವಿ ವಾರ್ತೆ ಧಾರವಾಡ:** ನಗರದ ಕೃಷಿ ವಿಶ್ವವಿದ್ಯಾಲಯ ಹಾಗೂ ಆಕಾಶವಾಣಿ ಕೇಂದ್ರಗಳು, ನಾಡಿನ ಜ್ಞಾನದ ಕೇಂದ್ರಗಳಾಗಿವೆ. ಕೃಷಿ ರಂಗ ಕಾರ್ಯಕ್ರಮಗಳ ಮೂಲಕ ಆಕಾಶವಾಣಿ ಕೃಷಿಕರಿಗೆ ಮಾಹಿತಿಯ ಮೂಲವಾಗಿದೆ ಎಂದು ಧಾರವಾಡ ಕೃಷಿ ವಿಶ್ವವಿದ್ಯಾಲಯದ ಉಪ ಕುಲಪತಿ ಡಾಕ್ಟರ ಪಿ.ಎಲ್ ಪಾಟೀಲ್ ಹೇಳಿದರು. ಧಾರವಾಡ ಆಕಾಶವಾಣಿ ಕೇಂದ್ರದ ಸಹಾಯಕ ನಿರ್ದೇಶಕ ಹಾಗೂ ಕಾರ್ಯಕ್ರಮ ವಿಭಾಗದ ಮುಖ್ಯಸ್ಥ, ಭಾರತೀಯ ಪ್ರಸಾರ ಸೇವೆ (ಐ.ಬಿ.ಪಿ.ಎಸ್.) ಹಿರಿಯ ಅಧಿಕಾರಿ, ಮಾರ್ಚ್ 31 ರಂದು ನಿವೃತ್ತರಾಗಲಿರುವ ಶರಣ ಬಸವ ಚೋಳಿನ ಅವರ ಬೀಳ್ಕೊಡುಗೆ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದರು. ಹಲವು ವಿಷಯಗಳ ಬಗ್ಗೆ ತಜ್ಞತೆ ಹೊಂದಿರುವ ಶರಣಬಸವ ಚೋಳಿನ ಅವರು, ಜನಪರ ಕಾರ್ಯಕ್ರಮಗಳ ಮೂಲಕ ಹೆಸರಾಗಿದ್ದಾರೆ ಎಂದರು.

ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದ ಮನಗುಂಡಿ, ಶ್ರೀ ಗುರು ಬಸವ ಮಹಾಮನೆಯ ಶ್ರೀ ಬಸವಾನಂದ ಸ್ವಾಮೀಜಿ ಮಾತನಾಡಿ, ಸೃಜನಶೀಲ ಹಾಗೂ ಕ್ರಿಯಾಶೀಲ ಕಾರ್ಯಕ್ರಮ ಅಧಿಕಾರಿಯಾಗಿ, ಆಕಾಶವಾಣಿ ಧಾರವಾಡ ಕೇಂದ್ರವನ್ನು ಜನಾನುರಾಗಿಯಾಗಿ ರೂಪಿಸಿದ ಕೀರ್ತಿ ಶರಣಬಸವ ಚೋಳಿನ ಅವರಿಗೆ ಸಲ್ಲುತ್ತದೆ ಎಂದು, ಅಭಿನಂದನೆ ಸಲ್ಲಿಸಿದರು.

ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಉಪ ಕುಲಪತಿ, ಪ್ರೊಫೆಸರ್ ಎ.ಎಂ. ಖಾನ್ ಮಾತನಾಡಿ, ವಿಶ್ವವಿದ್ಯಾಲಯ ಪ್ರಾಯೋಜಿತ ಆಕಾಶವಾಣಿ ಕಾರ್ಯಕ್ರಮಗಳು ಉತ್ತಮವಾಗಿ ಮೂಡಿಬರುತ್ತಿವೆ. ಈ ಕಾರ್ಯಕ್ರಮಗಳು ಇನ್ನು ಮುಂದೆಯೂ ಮುಂದುವರೆಯಲಿವೆ ಎಂದರು. ನಿವೃತ್ತಿ ಹೊಂದಲಿರುವ ಶರಣಬಸವ ಚೋಳಿನ ಅವರನ್ನು ಶಬ್ದಗಳ ಭಂಡಾರ ಎಂದು ಉಲ್ಲೇಖಿಸಿದ ಅವರು, ನಿವೃತ್ತಿ ಜೀವನ ಸಂತಸದಾಯಕವಾಗಿರಲಿ ಎಂದು ಹಾರೈಸಿ, ಅಭಿನಂದಿಸಿದರು. ಸಮಾರಂಭದಲ್ಲಿ ಆಕಾಶವಾಣಿ ಕೇಂದ್ರದ ತಾಂತ್ರಿಕ ವಿಭಾಗದ ಉಪ ಮಹಾನಿರ್ದೇಶಕ ಅರುಣ ಪ್ರಭಾಕರ, ಹಿರಿಯ ಕಾರ್ಯಕ್ರಮ ನಿರ್ವಾಹಕಿ, ಮಂಜುಳಾ ಪುರಾಣಿಕ ಸೇರಿದಂತೆ, ಕೇಂದ್ರದ ಅಧಿಕಾರಿಗಳು, ಸಿಬ್ಬಂದಿ, ವಿಶೇಷ ಆಹ್ವಾನಿತ ಗಣ್ಯರು, ಶರಣ ಬಸವ ಚೋಳಿನ ಅವರಿಗೆ ಅಭಿನಂದನೆ ಸಲ್ಲಿಸಿ, ಶುಭ ಹಾರೈಸಿದರು. ಕಾರ್ಯಕ್ರಮದಲ್ಲಿ ಆಕಾಶವಾಣಿಯ ಅಭಿಮಾನಿ ಕೇಳುಗರು ಇದ್ದರು.

ಸದಾಶಿವ ಐಹೊಳೆ ಪ್ರಾರ್ಥನಾ ಗೀತೆ ಹಾಡಿದರು, ಹಿರಿಯ ಉದ್ಘೋಷಕಿ ಮಾಯಾ ರಾಮನ್ ಕಾರ್ಯಕ್ರಮ ನಿರೂಪಿಸಿದರು. ಸಹಾಯಕ ಅಭಿಯಂತರ ಎಸ್. ವೈ ಕಾಂಬಳೆ ಧನ್ಯವಾದ ಸಲ್ಲಿಸಿದರು.

# 12.59 ಕೋಟಿ ರೂ ಲಾಭ ಗಳಿಸಿದ್ದು, ಇತಿಹಾಸದಲ್ಲೇ ಅತ್ಯಧಿಕ ವಹಿವಾಟು ದಾಖಲಿಸಿದೆ-ಬಾಲಚಂದ್ರ ಜಾರಕಿಹೊಳಿ



**ಬೆಳಗಾವಿ ವಾರ್ತೆ ಬೆಳಗಾವಿ:** ಬೆಳಗಾವಿ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ (ಬೆಮೂಲ್)ವು 2025-26ನೇ ಸಾಲಿನಲ್ಲಿ 12.59 ಕೋಟಿ ಲಾಭ ಗಳಿಸಿದ್ದು, ಇತಿಹಾಸದಲ್ಲೇ ಅತ್ಯಧಿಕ ವಹಿವಾಟು ದಾಖಲಿಸಿದೆ ಎಂದು ಒಕ್ಕೂಟದ ಅಧ್ಯಕ್ಷ ಹಾಗೂ ಅರಬಾವಿ ಶಾಸಕ ಬಾಲಚಂದ್ರ ಜಾರಕಿಹೊಳಿ ತಿಳಿಸಿದ್ದಾರೆ.

ನಗರದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಕ್ಕೂಟವು ಒಟ್ಟು 510 ಕೋಟಿ ವಹಿವಾಟು ನಡೆಸಿದ್ದು, ಇದು ಇತಿಹಾಸದಲ್ಲೇ ಅತಿ ಹೆಚ್ಚು. ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಪ್ರತಿ ಲೀಟರ್‌ಗೆ 37.20 ರೂ ದರದಲ್ಲಿ ಒಟ್ಟು 331 ಕೋಟಿ ಹಾಲಿನ ಬಿಲ್ ಪಾವತಿಸಲಾಗಿದೆ ಎಂದು ಮಾಹಿತಿ ನೀಡಿದರು.

ಈ ವರ್ಷದಲ್ಲಿ 100 ನೂತನ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಸ್ಥಾಪಿಸಲಾಗಿದ್ದು, ಒಂದು ವರ್ಷದಲ್ಲಿ ಇಷ್ಟು ಸಂಘಗಳನ್ನು ಆರಂಭಿಸಿರುವುದು ಮೊದಲ ಬಾರಿಗೆ ಎನ್ನಲಾಗಿದೆ. ಇದರಿಂದ ಒಟ್ಟು ಸಂಘಗಳ ಸಂಖ್ಯೆ 685ಕ್ಕೆ ಏರಿಕೆಯಾಗಿದೆ.

ನಿತ್ಯ ಸರಾಸರಿ 2.50 ಲಕ್ಷ ಕೆಜಿ ಹಾಲು ಶೇಖರಣೆ ಆಗುತ್ತಿದ್ದು, ಕಳೆದ ಸಾಲಿನ ಹೋಲಿಕೆಯಲ್ಲಿ ದಿನಕ್ಕೆ 50 ಸಾವಿರ ಕೆಜಿ ಹೆಚ್ಚಳವಾಗಿದೆ. ಈ ಸಾಲಿನಲ್ಲಿ ಗರಿಷ್ಠ 2.75 ಲಕ್ಷ ಕೆಜಿ ಹಾಲು ಶೇಖರಣೆ ಮಾಡುವ ಮೂಲಕ ಹೊಸ ದಾಖಲೆ ನಿರ್ಮಿಸಲಾಗಿದೆ.

ಒಟ್ಟು 8.20 ಕೋಟಿ ಕೆಜಿ ಹಾಲು ಸಂಗ್ರಹವಾಗಿದ್ದು, ಇದರಲ್ಲಿ 6.70 ಕೋಟಿ ಕೆಜಿ ಆಕಳು ಹಾಲು ಹಾಗೂ 1.50 ಕೋಟಿ ಕೆಜಿ ಎಮ್ಮೆ ಹಾಲು ಸೇರಿವೆ. ಸರ್ಕಾರದಿಂದ 31 ಕೋಟಿ ಪ್ರೋತ್ಸಾಹಧನ ಪಾವತಿಸಲಾಗಿದ್ದು, ಇನ್ನೂ 7.50 ಕೋಟಿ ಬಿಡುಗಡೆ ಬಾಕಿಯಿದೆ ಎಂದು ತಿಳಿಸಿದ್ದಾರೆ.

ಉತ್ಪಾದನಾ ಕ್ಷೇತ್ರದಲ್ಲಿಯೂ ಬೆಮೂಲ್ ಪ್ರಗತಿ ಸಾಧಿಸಿದ್ದು, 550 ಮೆಟ್ರಿಕ್ ಟನ್ ತುಪ್ಪ, 230 ಮೆಟ್ರಿಕ್ ಟನ್ ಪನ್ನೀರ್ ಹಾಗೂ 35 ಮೆಟ್ರಿಕ್ ಟನ್ ಪೇಡಾ ಉತ್ಪಾದಿಸಲಾಗಿದೆ. ಬೆಳಗಾವಿ, ಗೋವಾ ಮತ್ತು ಪುಣೆ ಮಾರುಕಟ್ಟೆ ಪ್ರದೇಶಗಳಲ್ಲಿ 55 ಫ್ರಾಂಚೈಸಿಗಳನ್ನು ಪ್ರಾರಂಭಿಸಲಾಗಿದೆ. ಅಲ್ಲದೆ, ನಿತ್ಯ 1 ಲಕ್ಷ ಲೀಟರ್ ಸ್ಯಾಚೆಟ್ ಹಾಲು ಮತ್ತು 13 ಸಾವಿರ ಲೀಟರ್ ಮೊಸರು ಮಾರಾಟವಾಗುತ್ತಿದೆ.

ಆಂಧ್ರ ಪ್ರದೇಶ ಸರ್ಕಾರದ ಅಕ್ಷರ ದಾಸೋಹ ಯೋಜನೆಯಡಿ ಶಾಲಾ ಮಕ್ಕಳಿಗೆ ನಿತ್ಯ 25 ಸಾವಿರ ಲೀಟರ್ ಫ್ಲೇಕ್ಸಿ ಹಾಲು ಪೂರೈಕೆ ಮಾಡಲಾಗುತ್ತಿದೆ ಎಂದು ವಿವರಿಸಿದರು.

ಕಳೆದ 2024-25ನೇ ಸಾಲಿನ 13.26 ಕೋಟಿ ಲಾಭದಲ್ಲಿ ಹಾಲು ಉತ್ಪಾದಕರಿಗೆ 60% ಅನುದಾನ ನೀಡಲಾಗಿದ್ದು, ವಿವಿಧ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ?70 ಲಕ್ಷ ವೆಚ್ಚದಲ್ಲಿ 437 ವಿದ್ಯುತ್ ಚಾಲಿತ ಮೇವು ಕತ್ತರಿಸುವ ಯಂತ್ರಗಳು, 1.84 ಕೋಟಿ ಮೌಲ್ಯದ 12,500 ರಬ್ಬರ್ ಮ್ಯಾಟ್‌ಗಳು, ?11 ಲಕ್ಷ ಮೌಲ್ಯದ 65 ಹಾಲು ಕರೆಯುವ ಯಂತ್ರಗಳು ವಿತರಿಸಲಾಗಿದೆ. ಜೊತೆಗೆ 2 ಕೋಟಿ ವೆಚ್ಚದಲ್ಲಿ 40 ಸಂಘಗಳಿಗೆ ಕಟ್ಟಡ ನಿರ್ಮಾಣ ಹಾಗೂ ?1.80 ಕೋಟಿ ಯನ್ನು 15 ನೂತನ ಬಿಎಂಸಿ ಘಟಕಗಳನ್ನು ಸ್ಥಾಪನೆ ನೀಡಲಾಗಿದೆ ಎಂದರು.

ಜಿಲ್ಲಾ ಹಾಲು ಒಕ್ಕೂಟದ ನಿರ್ದೇಶಕರಾದ ಬಾಬು ಕಟ್ಟಿ, ಮಲ್ಲಪ್ಪ ಪಾಟೀಲ, ಕಲ್ಲಪ್ಪ ಗಿರೆಣ್ಣವರ, ಡಾ. ಬಸವರಾಜ ಪರವಣ್ಣನವರ, ಬಾಬುರಾವ ವಾಗ್ಮರೆ, ವಿರುಪಾಕ್ಷಿ ಈಟಿ, ರಾಯಪ್ಪ ಡೂಗ, ಪ್ರಕಾಶ ಅಂಬೋಜಿ, ಮಹಾದೇವ ಬಿಳಿಕುರಿ, ಸಂಜಯ ಶಿಂತ್ರಿ, ರಮೇಶ ಅಣ್ಣಿಗೇರಿ, ಸದೆಪ್ಪ ವಾರಿ, ಬಸವರಾಜ ಮಾಳೆದವರ, ವ್ಯವಸ್ಥಾಪಕ ನಿರ್ದೇಶಕ ಡಾ. ಶ್ರೀಕಾಂತ ವಿ.ಎಸ್ ಮುಂತಾದವರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

# ಮಹಿಳಾ ವಿವಿಯಲ್ಲಿ ಮಹಾವೀರ ಜಯಂತಿ



**ಬೆಳಗಾವಿ ವಾರ್ತೆ ವಿಜಯಪುರ:** ಮಹಾವೀರರು ಸಾರಿದ ಅಹಿಂಸೆ, ಸತ್ಯ, ಅಪರಿಗ್ರಹ ಮತ್ತು ಆತ್ಮಸಂಯಮದ ತತ್ವಗಳು ಇಂದಿನ ಸಮಾಜದಲ್ಲಿ ಅತ್ಯಂತ ಪ್ರಸ್ತುತವಾಗಿವೆ ಎಂದು ಮಹಿಳಾ ವಿವಿಯ ಕುಲಪತಿ ಪ್ರೊ.ವಿಜಯಾ ಕೋರಿಶೆಟ್ಟಿ ಹೇಳಿದರು. ನಗರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದಲ್ಲಿ ಮಹಾವೀರ ಜಯಂತಿ ಅಂಗವಾಗಿ ಸೋಮವಾರ ಆಯೋಜಿಸಿದ್ದ ಭಾವಪೂರ್ಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶಿಕ್ಷಣದೊಂದಿಗೆ ನೈತಿಕ ಮೌಲ್ಯಗಳ ಬೆಳವಣಿಗೆಯೂ ಅಗತ್ಯವಿದೆ. ವಿದ್ಯಾರ್ಥಿನಿಯರು ಮಹಾವೀರರ ಆದರ್ಶಗಳು ಹಾಗೂ ಮೌಲ್ಯಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಸಮಾಜದ ಸುಧಾರಣೆಗೆ ಕೈಜೋಡಿಸಬೇಕೆಂದು ಎಂದರು.

ಕಾರ್ಯಕ್ರಮದಲ್ಲಿ ಮೌಲ್ಯಮಾಪನ ಕುಲಸಚಿವ ಪ್ರೊ.ಬಿ.ಎಲ್.ಲಕ್ಕಣ್ಣನವರ್, ಪ್ರೊ.ನಾಮದೇಗೌಡ, ಪ್ರೊ.ರಾಜಕುಮಾರ್ ಮಾಲಿಪಾಟೀಲ್, ಪ್ರೊ.ಜ್ಯೋತಿ ಉಪಾಧ್ಯಾಯ, ಡಾ.ಜಾಯ್ ಹೊಸಕೇರಿ, ಭಾಗ್ಯಶ್ರೀ ದೊಡ್ಡಮನಿ, ಗೀತಾ ಸರಳಾಯಿ, ವಿಜಯಕುಮಾರ್ ಎಸ್. ಹಿರೇಮಠ್, ಸಿದ್ದು ಕಟ್ಟಿಮನಿ, ಸತಿ ನಿಲಯಗಳ ನಿಲಯಪಾಲಕರು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯವರು ಮತ್ತು ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

# ಕ್ರೀಡಾ ಸ್ಫೂರ್ತಿ ಮೆರೆಯೋಣ : ಮಹೇಶ ಪೋತದಾರ



**ಬೆಳಗಾವಿ ವಾರ್ತೆ ವಿಜಯಪುರ:** ಜೀವನದಲ್ಲಿ ಸೋಲು ಗೆಲುವು ಹೇಗೆ ನಡೆಯುತ್ತಿದೆಯೂ ಹಾಗೆ ಕ್ರೀಡಾ ಕ್ಷೇತ್ರದಲ್ಲಿಯೂ ಸೋಲು ಗೆಲುವು ನಡೆಯುತ್ತಿರುತ್ತದೆ. ಸೋಲು ಗೆಲುವಿನ ನಡುವೆ ಕ್ರೀಡಾ ಸ್ಫೂರ್ತಿ ಮೆರೆಯೋಣ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಮಹೇಶ ಪೋತದಾರ ಹೇಳಿದರು. ನಗರದ ಜಲನಗರ ಮೈದಾನದಲ್ಲಿ ದಲಿತ ವಿದ್ಯಾರ್ಥಿ ಪರಿಷತ್ ಹಾಗೂ ಜಿಲ್ಲೆಯ ವಿವಿಧ ಪ್ರಗತಿಪರ ಸಂಘ ಸಂಸ್ಥೆ ಗಳು ಆಯೋಜನೆ ಮಾಡಿರುವ "ಅಂಬೇ ಡ್ಕರ್ ಹಬ್ಬ" ಪ್ರಯುಕ್ತ ವಸತಿ ನಿಲಯದ ವಿದ್ಯಾರ್ಥಿಗಳಿಗೆ ಆಯೋಜಿಸ 'ಲಾದ ಮಹಾನಾಯಕ ಕ್ರಿಕೆಟ್ ಟೂರ್ನಮೆಂಟ್ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾ ಡಿದ ಅವರು, ದಲಿತ ವಿದ್ಯಾರ್ಥಿ ಪರಿಷತ್ ನಾಡಿನಲ್ಲಿ ವಿದ್ಯಾರ್ಥಿಗಳ ಪರ ಧ್ವನಿಯಾಗಿ ಸಾಗುತ್ತಿದೆ ಮತ್ತು ಬಹಳ ವಿಭಿನ್ನವಾಗಿ ಸಮುದಾಯಗಳಿಗೆ ಕಾರ್ಯಕ್ರಮಗಳನ್ನು ಆಯೋಜನೆ ಮಾಡುತ್ತ ಬರುತ್ತಿರುವುದು ಸ್ವಾಗತಾರ್ಹ. ಈಗ ನಾಲ್ಕು ದಿನಗಳ ಅಂಬೇಡ್ಕರ್ ಹಬ್ಬದ ಪ್ರಯುಕ್ತ ವಿದ್ಯಾರ್ಥಿ ಗಳಿಗೆ ವಿಭಿನ್ನ ಕಾರ್ಯಕ್ರಮಗಳನ್ನು ಆಯೋಜನೆ ಮಾಡುತ್ತಿರುವುದು ಖುಷಿ ನೀಡಿದೆ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸಮಾಜ ಕಲ್ಯಾಣ ಇಲಾಖೆ ತಾಲ್ಲೂಕ ಸಹಾಯಕ ನಿರ್ದೇಶಕ ಬಿ. ಜೆ. ಇಂಡಿ ಅವರು ಮಾತನಾಡಿ, ಅಂಬೇಡ್ಕರ್ ಹಬ್ಬ ಪ್ರಯುಕ್ತ ದಲಿತ ವಿದ್ಯಾರ್ಥಿ ಪರಿಷತ್ ಸಂಘಟನೆಯು ಪ್ರತಿ ವರ್ಷ ವಸತಿ ನಿಲಯದ ವಿದ್ಯಾರ್ಥಿಗಳಿಗೆ ಮಹಾನಾಯಕ ಕ್ರಿಕೆಟ್ ಟೂರ್ನಾಮೆಂಟ್ ಆಯೋಜನೆ ಮಾಡುವ ಮೂಲಕ ವಿದ್ಯಾರ್ಥಿಗಳಲ್ಲಿ ಕ್ರೀಡಾ ಸ್ಫೂರ್ತಿ ತುಂಬುವ ಕೆಲಸ ಮಾಡುತ್ತಿರುವುದು ಶ್ಲಾಘನೀಯವಾಗಿದೆ ಎಂದರು.

ಈ ವೇಳೆ ದಲಿತ ವಿದ್ಯಾರ್ಥಿ ಪರಿಷತ್ತಿನ ಜಿಲ್ಲಾ ಸಹ ಸಂಚಾಲಕ ಮಹಾದೇವ ಚಲವಾದಿ, ನಗರ ಘಟಕದ ಸಂಚಾಲಕ ಹುಚ್ಚಪ್ಪ ಬಾವಿಮನಿ, ಮುಖಂಡರಾದ ಶಂಕರ ಬಸರಗಿ, ಯುವರಾಜ್ ಓಲೇಕಾರ್, ಸಂದೇಶ ಕುಮಟಗಿ, ಆಕಾಶ ಮಾದರ, ಆದಿತ್ಯ ಅಲ್ಲದೇ ವಿವಿಧ ವಸತಿ ನಿಲಯದಿಂದ ಬಂದಿದೆ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಹಾನಗಲ್‌ನಲ್ಲಿ ಶಾಸಕ ಶ್ರೀನಿವಾಸ ಮಾನೆ ಅವರ ಜನಸಂಪರ್ಕ ಕಚೇರಿಯಲ್ಲಿ ಭಗವಾನ್ ಮಹಾವೀರ ಜಯಂತಿಯನ್ನು ಆಚರಿಸಲಾಯಿತು.ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು, ನಗರ ಕಾಂಗ್ರೆಸ್ ಅಧ್ಯಕ್ಷರು, ಮುಖಂಡರು, ಜೈನ ಸಮಾಜದ ಪದಾಧಿಕಾರಿಗಳು ಇದ್ದರು.

# ಪ್ರತ್ಯೇಕ ಮಹಾನಗರ ಪಾಲಿಕೆ ರಚನೆ ನಮ್ಮ ಗುರಿ: ಶಾಸಕ ಕುಲಕರ್ಣಿ




**ಬೆಳಗಾವಿ ವಾರ್ತೆ ಧಾರವಾಡ/ ಕಿತ್ತೂರು:** ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯನ್ನು ವಿಭಜಿಸಿ, ಪ್ರತ್ಯೇಕ ಪಾಲಿಕೆ ಮಾಡಬೇಕೆಂಬುದು ಮೊದಲಿನಿಂದಲೂ ನಮ್ಮ ಒತ್ತಾಯವಾಗಿದೆ ಎಂದು ಶಾಸಕ ವಿನಯ್ ಕುಲಕರ್ಣಿ ತಿಳಿಸಿದರು.

ಕಿತ್ತೂರಿನ ದೊಂಬರಕೊಪ್ಪದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಈ ಕುರಿತು ಈಗಾಗಲೇ ಮುಖ್ಯಮಂತ್ರಿಗಳೊಂದಿಗೆ ಸಮಾಲೋಚನೆ ನಡೆಸಲಾಗಿದೆ. ಆದರೆ ಈ ಪ್ರಕ್ರಿಯೆಗೆ ಯಾರು ತಡೆಯೊಡ್ಡುತ್ತಿದ್ದಾರೆ ಎಂಬುದು ಎಲ್ಲರಿಗೂ ತಿಳಿದಿದೆ ಎಂದು ಮಾರ್ಮಿಕವಾಗಿ ನುಡಿದರು.

ರಾಜ್ಯದ ಉಪಚುನಾವಣೆಯ ಎರಡೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆ ಎಂದರು. ನಾನು ಸಹ ಸ್ಟಾರ್ ಕ್ಯಾಂಪೇನರ್ ಆಗಿದ್ದು, ನಾಳೆಯಿಂದ ಪ್ರಚಾರ ಕಾರ್ಯದಲ್ಲಿ ಭಾಗಿಯಾಗಲಿದ್ದೇನೆ. ದಾವಣಗೆರೆಯಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ, ಅಲ್ಲಿಯೂ ಪಕ್ಷಕ್ಕೆ ಜಯ ಸಿಗಲಿದೆ ಎಂದರು.

ಮುಂದಿನ ದಿನಗಳಲ್ಲಿ ಸಚಿವ ಸಂಪುಟ ವಿಸ್ತರಣೆಯಾದರೆ ನನಗೂ ಅವಕಾಶ ನೀಡಬಹುದು ಎಂಬ ಆಶಯವಿದೆ. ಹೈಕಮಾಂಡ್ ಮನಸು ಮಾಡಿದರೆ ನಾನು ಸಚಿವನಾಗಿ ಸೇವೆ ಸಲ್ಲಿಸಲು ಸಿದ್ಧನಿದ್ದೇನೆ. ಈ ಕುರಿತು ಹೈಕಮಾಂಡ್ ತೆಗೆದುಕೊಳ್ಳುವ ನಿರ್ಧಾರಕ್ಕೆ ನಾನು ಬದ್ಧನಾಗಿರುತ್ತೇನೆ ಎಂದರು. ಈ ಸಂದರ್ಭದಲ್ಲಿ ಬ್ಲಾಕ ಅಧ್ಯಕ್ಷ ಹಾಗೂ ಧಾರವಾಡ ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ಅರವಿಂದ ಏಗನಗೌಡರ ಹಾಗೂ ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.

# "ನೇಹಾ ಹಿರೇಮಠ್ ಗೆ ಆದ ಗತಿಯೇ ನಿನಗೂ ಬರುತ್ತದೆ": ಜೈಲಿನಿಂದಲೇ ಅಪ್ರಾಪ್ತೆಗೆ ವಿಡಿಯೋ ಕರೆ ಮೂಲಕ ಬೆದರಿಕೆ ಹಾಕಿದ POCSO ಆರೋಪಿ




ಧಾರಾವಾಡ: ಜೈಲುಗಳಲ್ಲಿ ಕೈದಿಗಳು ಐಶಾರಾಮಿ ಜೀವನ ನಡೆಸುತ್ತಿರುವ ಕುರಿತು ವ್ಯಾಪಕ ಸುದ್ದಿಗಳು ಹರಿದಾಡುತ್ತಿರುವ ಬೆನ್ನಲ್ಲೇ ಇದೀಗ ಪೋಕ್ಸೋ ಪ್ರಕರಣ ಆರೋಪಿ ಜೈಲಿನಿಂದಲೇ ಅಪ್ರಾಪ್ತ ಸಂತ್ರಸ್ತೆಗೆ ವಿಡಿಯೋ ಕರೆ ಮಾಡಿ ಬೆದರಿಕೆ ಹಾಕಿದ್ದಾನೆ.

ಹೌದು.. ಧಾರವಾಡ ಕೇಂದ್ರ ಕಾರಾಗೃಹದಲ್ಲಿ ಪೋಕ್ಸೊ ಪ್ರಕರಣದ ಫರ್ವೇಜ್ ಎಂಬ ಆರೋಪಿ ಜೈಲಿನಿಂದಲೇ ಅಪ್ರಾಪ್ತ ಬಾಲಕಿಗೆ ವಿಡಿಯೋ ಕರೆ ಮಾಡಿ ನಿರಂತರ ಕಿರುಕುಳ ನೀಡಿರುವ ಘಟನೆ ವರದಿಯಾಗಿದೆ.

ಈ ಆರೋಪಿಯು ಬಾಲಕಿಗೆ ಬೆದರಿಕೆ ಹಾಕುತ್ತಾ, ನ್ಯಾಯಾಲಯದಲ್ಲಿ ತನ್ನ ಪರವಾಗಿ ಸಾಕ್ಷಿ ಹೇಳಿಲು ಒತ್ತಾಯಿಸಿದ್ದಾನೆ ಎಂದು ವರದಿಯಾಗಿದೆ.

ಮೂಲಗಳ ಪ್ರಕಾರ ಆರೋಪಿಯು ತನ್ನ ಕೈ ಮೇಲೆ ಸಂತ್ರಸ್ತೆಯ ಹೆಸರನ್ನು ಬರೆದುಕೊಂಡು ವಿಡಿಯೋ ಕರೆ ಮಾಡಿದ್ದಾನೆ ಎಂದು ತಿಳಿದುಬಂದಿದೆ.

**ನೇಹಾ ಹಿರೇಮಠ್ ಗೆ ಆದ ಗತಿಯೇ ನಿನಗೂ..**

ಅಂತೆಯೇ ಒಂದು ವೇಳೆ ವಿಡಿಯೋ ಕಾಲ್ ಮಾಡಿದಾಗ ರಿಸೀವ್ ಮಾಡದೇ ಇದ್ದರೆ ಜೀವ ಬೆದರಿಕೆ ಹಾಕಿದ್ದಾನೆ. ನೇಹಾ ಹಿರೇಮಠ್ ಗೆ ಆದ ಗತಿಯೇ ನಿನಗೂ ಆಗುತ್ತದೆ ಎಂದು ಹೇಳಿದ್ದಾನೆ. ಜೊತೆಗೆ ಅಶ್ಲೀಲ ವಿಡಿಯೋ ವೈರಲ್ ಮಾಡುವುದಾಗಿ ಬೆದರಿಕೆ ಹಾಕಿದ್ದಾನೆ ಎಂಬ ಆರೋಪ ಕೇಳಿಬಂದಿದೆ.

**ಅಧಿಕಾರಿಗಳ ಕೈವಾಡ**

ಇನ್ನು ಈ ಘಟನೆಯು ಜೈಲುಗಳಲ್ಲಿ ಮೊಬೈಲ್ ಫೋನ್‌ಗಳ ಸುಲಭ ಲಭ್ಯತೆ ಮತ್ತು ಬಳಕೆಯ ಕುರಿತು ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಪೊಲೀಸ್ ಅಧಿಕಾರಿಗಳು ಜೈಲುಗಳಲ್ಲಿ ಮೊಬೈಲ್‌ಗಳ ಬಳಕೆಗೆ ಅವಕಾಶವಿಲ್ಲ ಎಂದು ಪದೇ ಪದೇ ಹೇಳುತ್ತಿರುತ್ತಾರೆ.

ಆದರೆ, ಈ ಪ್ರಕರಣವು ಇದಕ್ಕೆ ವ್ಯತಿರಿಕ್ತವಾದ ಚಿತ್ರಣವನ್ನು ನೀಡಿದೆ. ಇದರ ನಡುವೆ ವಿಡಿಯೋ ಕಾಲ್ ಮಾಡಿ ಬೆದರಿಕೆ ಹಾಕುತ್ತಿರುವ ವಿಷಯ ಗೊತ್ತಿದ್ದರೂ ಕೂಡ ಧಾರವಾಡ ಜೈಲಾಧಿಕಾರಿಗಳು ಸುಮ್ಮನೆ ಇದ್ದಾರಾ ಎಂಬ ಅನುಮಾನ ಮೂಡಿಬಂದಿದೆ.

**ಶ್ರೀರಾಮಸೇನೆ ಆಕ್ರೋಶ**

ಲವ್ ಜಿಹಾದ್ ಆರೋಪವೂ ಕೇಳಿಬಂದಿರುವ ಈ ಪ್ರಕರಣದ ಆರೋಪಿಯು ಬಾಲಕಿಗೆ ನಿರಂತರವಾಗಿ ಹಿಂಸೆ ನೀಡುತ್ತಿದ್ದು, ಆಕೆಯ ಕುಟುಂಬ ಆತಂಕಗೊಂಡಿದೆ. ಜೈಲಾಧಿಕಾರಿಗಳ ಸಹಾಯವಿಲ್ಲದೆ ಇಂತಹ ಕೃತ್ಯ ಅಸಾಧ್ಯ ಎಂದು ಕುಟುಂಬದವರು ಆರೋಪಿಸಿದ್ದು, ಸೂಕ್ತ ಕ್ರಮಕ್ಕೆ ಆಗ್ರಹಿಸಿದ್ದಾರೆ.

ಮಾ.13ರಂದು ಜೈಲಿನಿಂದ ಆರೋಪಿ ವಿಡಿಯೋ ಕಾಲ್ ಮಾಡಿದ್ದಾನೆ. ಈ ವಿಷಯವನ್ನು ಅಪ್ರಾಪ್ತೆಯ ಕುಟುಂಬಸ್ಥರು ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಿದ್ರೂ ಕೂಡ ಕ್ಯಾರೆ ಎನ್ನುತ್ತಿಲ್ಲ. ಇದೀಗ ಶ್ರೀರಾಮಸೇನೆ ಮುಂದೆ ಅಳಲು ತೋಡಿಕೊಂಡಿದ್ದಾರೆ.

ಮಾನ್ಯ ಗೃಹಮಂತ್ರಿಗಳೇ ಇದಕ್ಕೆ ಉತ್ತರ ನೀಡಿ, ಜೈಲಿನೊಳಗೆ ಸ್ಮಾರ್ಟ್ ಫೋನ್ ಹೇಗೆ ಹೋಯಿತು? ಅದೇನು ಜೈಲಾ ಅಥವಾ ಅಪರಾಧ ಮಾಡಲು ಇರುವ ಸುರಕ್ಷಿತ ತಾಣನಾ? ಎಂದು ರಾಜ್ಯ ಸರ್ಕಾರ ಮತ್ತು ಗೃಹ ಇಲಾಖೆ ವಿರುದ್ಧ ಶ್ರೀರಾಮಸೇನೆ ಮುಖಂಡರು ಆಕ್ರೋಶ ಹೊರಹಾಕಿದ್ದಾರೆ.

# ತರಬೇತಿ ಕಾರ್ಯಾಗಾರ



**ಬೆಳಗಾವಿ ವಾರ್ತೆ ನವಲಗುಂದ:** ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯಿದೆ 2009 ಜಾರಿಯಾದ ನಂತರ ಸಮುದಾಯ ಭಾಗವಹಿಸುವಿಕೆಗೆ ಮತ್ತಷ್ಟು ಕಾನೂನಾತ್ಮಕ ಒತ್ತಾಸೆ ಬಂದಿದ್ದು ಹೆಚ್ಚಿನ ಕಾನೂನಿನ ಬೆಂಬಲ ಸಿಕ್ಕಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ದೀಪಕ್ ಕುಲಕರ್ಣಿ ಹೇಳಿದರು.

ಅವರು ಪಟ್ಟಣದ ಸರಕಾರಿ ಮಾದರಿ ಕೇಂದ್ರ ಶಾಲೆ ಏರ್ಪಡಿಸಿದ್ದ ನವಲಗುಂದ ಉರ್ದು ಹಾಗೂ ಆರೇಕುರಹಟ್ಟಿ ಕ್ಲಸ್ಟರ್ ನ ಸರಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ಎಸ್ ಡಿ ಎಂ ಸಿ ಸದಸ್ಯರಿಗೆ ಒಂದು ದಿನದ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ನಾಗನೂರ ಶಾಲೆಯ ಎಸ್ ಡಿ ಎಂ ಸಿ ಅಧ್ಯಕ್ಷ ಶೌಕತಲಿ ಲಂಬೂನವರ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿ "ಶಾಲಾ ಅಭಿವೃದ್ಧಿ ಯೋಜನೆ ಎಂದರೆ ಶಾಲಾ ಹಂತದಲ್ಲಿ ಮಕ್ಕಳ ಶೈಕ್ಷಣಿಕ ಮತ್ತು ಶಾಲೆಯ ಸಮಗ್ರ ಅಭಿವೃದ್ಧಿ ಗಾಗಿ ಸಿದ್ದಪಡಿ ಸುವ ಯೋಜನೆಯಾಗಿರುತ್ತದೆ ಎಂದು ಹೇಳಿದರು."

ಕ್ಷೇತ್ರಸಮನ್ವಯಾಧಿಕಾರಿ ರೇಣುಕಾ ಮುರನಾಳ, ಶಿಕ್ಷಣ ಸಂಯೋಜಕ ಶಿವಾನಂದ ಬೆಂಚಿಕೇರಿ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಎಸ್ ಎಫ್ ನೀರಲಗಿ ಇತರರು ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು. ಎಸ್ ಡಿ ಎಂ ಸಿ ಅಧ್ಯಕ್ಷ ಈರಣ್ಣ ಬೆಂಡಿಗೇರಿ ಅಧ್ಯಕ್ಷತೆ ವಹಿಸಿದ್ದರು.

ಎನ್ ವಾಯ್ ಕಳಸಾಪುರ, ಪ್ರಧಾನ ಗುರುಗಳಾದ ಎನ್ ಎಸ್ ತಾಳಿಕೋಟಿಮಠ, ವೇದಾವತಿ ದಂಡಾಗಿದಾಸರ ಎಸ್ ಡಿ ಎಂ ಸಿ ಅಧ್ಯಕ್ಷ ಬನ್ನೇಪ್ಪ ಕುರಹಟ್ಟಿ, ಎನ್ ಆರ್ ಪಾಟೀಲ, ಉಮೇಶ್ ನವಲಗುಂದ, ಕಾಸಿಮಸಾಬ್ ಮಾಚಲಿಬಂದರ, ಯಕ್ಕುಂಡಿ, ವಿರೇಶ್ ಗುಳೇದ ಸೇರಿದಂತೆ ನಾಲ್ಕು ಕ್ಲಸ್ಟರ್ ನ ಶಾಲೆಗಳ ಎಸ್ ಡಿ ಎಂ ಸಿ ಸದಸ್ಯರು ಭಾಗವಹಿಸಿದ್ದರು.

# ಪುರಾಣ ಪ್ರವಚನ



**ಬೆಳಗಾವಿ ವಾರ್ತೆ ಲಕ್ಷೇಶ್ವರ:** ತಾಲೂಕ ಬಾಳೇಹೊಸೂರ ಶ್ರೀ ದಿಂಗಾಲೇಶ್ವರಮಠದಲ್ಲಿ ಏ.7 ಮತ್ತು 8 ರಂದು ನಡೆಯುತ್ತಿರುವ ಜಾತ್ರಾ ಮಹೋತ್ಸವ ಹಿನ್ನಲೆಯಲ್ಲಿ ನಿತ್ಯ ಸಂಜೆ ಶ್ರೀಮಠದಲ್ಲಿ ಗುಡ್ಡಾಪುರ ದಾನಮ್ಮದೇವಿ ಪುರಾಣ ಪ್ರಾರಂಭಗೊಂಡಿತು.

ಪ್ರಾರಂಭೋತ್ಸವ ನೆರವೇರಿಸಿದ ಆಂದ್ರಪ್ರದೇಶ ಉರವಕೊಂಡ ಉರಗಾದ್ರಿ ಸಂಸ್ಥಾನ ಗವಿಮಠದ ಡಾ.ಕರಿಬಸವ ರಾಜೇಂದ್ರ ಜಗದ್ಗುರುಗಳು ಆಶೀರ್ವಚನ ನೀಡಿದರು. ದೇವರು, ಧರ್ಮ, ಸಂಸ್ಕೃತಿ, ಸಂಪ್ರದಾಯ, ಆಚಾರ-ವಿಚಾರ, ಮಾನವೀಯ ಮೌಲ್ಯಗಳಿಂದ ಕೂಡಿದ ಸುಸಂಸ್ಕೃ ಸಮಾಜ ನಿರ್ಮಾಣದಲ್ಲಿ ಪುರಾಣ-ಪುಣ್ಯಕಥೆ, ಧರ್ಮ ಜಾಗೃತಿ, ಸತ್ಸಂಗದಂತಹ ಕಾರ್ಯಕ್ರಮಗಳು ಅವಶ್ಯ.

ಮಾನವ ತನ್ನ ಬದುಕಿನ ಜಂಜಾಟದ ಮಧ್ಯೆಯೂ ಬದುಕು ಪವಿತ್ರಗೊಳಿಸಲು ಜೀವನದಲ್ಲಿ ಧರ್ಮ, ಆಧ್ಯಾತ್ಮ, ಪುರಾಣ ಸತ್ಸಂಗವನ್ನು ಅಳವಡಿಸಿಕೊಳ್ಳುವುದು, ಶರಣ-ಶರಣೆಯರ, ಮಹಾತ್ಮರ ಚರಿತ್ರೆಗಳನ್ನು ಆಲಿಸುವ ಮೂಲಕ ಸನ್ಮಾರ್ಗದತ್ತ ಸಾಗಬೇಕು ಎಂದರು.

ಶ್ರೀಮಠದ ಶ್ರೀ ಫಕೀರ ದಿಂಗಾಲೇಶ್ವರ ಜಗದ್ಗುರುಗಳು ಸಾನಿಧ್ಯವಹಿಸಿ ಆಶೀರ್ವಚನ ನೀಡಿದರು.

ಶ್ರೀದೇವಿ ಮಾತಾಜಿ ಪ್ರವಚನ ನೀಡಿದರು. ಹೊನ್ನಿಗನೂರಿನ ಶ್ರೀ ವಿರುಪಾಕ್ಷಶಾಸ್ತ್ರಿಗಳು, ಈಶ್ವರಯ್ಯ ಮಾದಾಪುರಮಠ, ಅಶೋಕ ಮಾಗಿ, ರೇಣುಕಸ್ವಾಮಿ ವೆಂಕಟಾಪುರಮಠ ಸೇರಿ ಗ್ರಾಮದ ಹಿರಿಯರು, ಜಾತ್ರಾ ಸಮಿತಿಯವರು ಉಪಸ್ಥಿತರಿದ್ದರು. ಹುಬ್ಬಳ್ಳಿಯ ಪ್ರಭಾವತಿ ಹಿರೇಮಠ ನಿರೂಪಿಸಿದರು.

# ಮಕ್ಕಳ ಸರ್ವಾಂಗೀಣ ಬೆಳಗಣಿಗೆಯಲ್ಲಿ ಪಾಲಕರ ಪಾತ್ರ ಮಹತ್ವದ್ದಾಗಿದೆ: ಡಾ.ಪ್ರೀತಿ ವಣ್ಣೂರ




ಗೋಕಾಕ: ಮಕ್ಕಳು ಗ್ರಾಜ್ಯುವೇಷನ ಡೇ ಸಮಾರಂಭದಲ್ಲಿ ಪಾಲ್ಗೊಂಡಿರುವದು.

**ಬೆಳಗಾವಿ ವಾರ್ತೆ ಗೋಕಾಕ:** ಮಕ್ಕಳ ಸರ್ವಾಂಗೀಣ ಬೆಳಗಣಿಗೆಯಲ್ಲಿ ಪಾಲಕರ ಪಾತ್ರ ಮಹತ್ವದ್ದಾಗಿದೆ ಎಂದು ಇಲ್ಲಿಯ ಚಿಕ್ಕಮಕ್ಕಳ ತಜ್ಞೆ ಡಾ.ಪ್ರೀತಿ ವಣ್ಣೂರ ಹೇಳಿದರು.

ಅವರು, ಸೋಮವಾರದಂದು ನಗರದ ಶ್ರೀ ಚನ್ನಬಸವೇಶ್ವರ ವಿದ್ಯಾಪೀಠದ ಆಂಗ್ಲ ಮಾಧ್ಯಮ ಶಾಲೆಯ ಯುಕೆಜಿ ವಿದ್ಯಾರ್ಥಿಗಳ ಗ್ರಾಜ್ಯುವೇಷನ ಡೇ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು.

ಪ್ರತಿ ಮಕ್ಕಳಲ್ಲೂ ಕಲಿಕೆ ವಿಭಿನ್ನವಾಗಿರುತ್ತದೆ ಅದನ್ನು ಅರಿತು ಶಿಕ್ಷಕರು ಪಾಲಕರು ಸಹನೆಯಿಂದ ಸ್ಪಂಧಿಸಬೇಕು. ಮಕ್ಕಳಲ್ಲಿಯ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸಿ. ಶಿಕ್ಷಣದೊಂದಿಗೆ ಅವರಿಗೆ ಉತ್ತಮ ಸಂಸ್ಕಾರ ನೀಡಿ ಒಳ್ಳೆಯ ನಾಗರಿಕರನ್ನಾಗಿ ಮಾಡಿ. ಸಂಸ್ಥೆ ಶಿಕ್ಷಕರು, ಪಾಲಕರು ಪರಸ್ಪರ ಸಹಕಾರದಿಂದ ಕಾರ್ಯನಿರ್ವಹಿಸಿ ಮಕ್ಕಳ ಭವಿಷ್ಯವನ್ನು ಉಜ್ವಲಗೊಳಿಸುವಂತೆ ಕರೆ ನೀಡಿದರು.

ವೇದಿಕೆಯ ಮೇಲೆ ಶ್ರೀ ಬಸವಪ್ರಭು ಸ್ವಾಮಿಜಿ, ಆಡಳಿತ ಅಧಿಕಾರಿ ಅಡವೀಶ ಗವಿಮಠ, ಮುಖ್ಯೋಪಾಧ್ಯಾಯ ಎಸ್ ಕೆ ಮಠದ ಇದ್ದರು.

# ವಿಶ್ವ ರಂಗಭೂಮಿ ದಿನಾಚರಣೆ



**ಬೆಳಗಾವಿ ವಾರ್ತೆ ಹುಬ್ಬಳ್ಳಿ :** ವಿಶ್ವ ರಂಗಭೂಮಿ ದಿನಾಚರಣೆ ಅಂಗವಾಗಿ ಸುನಿಧಿ ಕಲಾ ಸೌರಭದವರು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಿರಂತರವಾಗಿ ರಂಗಭೂಮಿಯಲ್ಲಿ ಕೆಲಸ ಮಾಡುತ್ತಿರುವ, ಅನಾಥರ ಮಾಯಿ ಪದ್ಮಶ್ರೀ ಡಾ. ಸಿಂಧುತಾಯಿ ಸಪಕಾಳ ಅವರ ಕಾರ್ಯಗಳ ಬಗ್ಗೆ ಶ್ರದ್ಧಾ, ಭಕ್ತಿಯಿಂದ ಗೌರವ ಹೊಂದಿರುವ ಹಾಗೂ ಡಾ. ಸಿಂಧುತಾಯಿ ಸಪಕಾಳ ಅವರ ಜೀವನದ ಯಶೋಗಾಥೆಯನ್ನು ಕನ್ನಡ ರಂಗಭೂಮಿಗೆ ಪರಿಚಯಿಸಿದ ಸುನಿಧಿ ಕಲಾ ಸೌರಭದ ಅಧ್ಯಕ್ಷ, ರಂಗಾಯಣದ ಮಾಜಿ ನಿರ್ದೇಶಕ ಸುಭಾಸ ನರೇಂದ್ರ ಅವರಿಗೆ ಹೊರಕೇರಿ ಮಾಸ್ತರ ಶಿಕ್ಷಣ ಪ್ರತಿಷ್ಠಾನ, ರಾಣಿ ಚನ್ನಮ್ಮ ಪರಿಸರ ಸೇವಾ ಸಮಿತಿಯ, ಬಸವ ಪರಿಸರ ಸಂರಕ್ಷಣಾ ಸಮಿತಿಯ ಪದಾಧಿಕಾರಿಗಳು ಶಾಲು, ಮಾಲಾರ್ಪಣೆ ಮಾಡಿ ಗೌರವದಿಂದ ಆತ್ಮೀಯವಾಗಿ ಸನ್ಮಾನಿಸಿದರು.

ಅಭಿನಂದಿಸಿ, ರಂಗಭೂಮಿ ದಿನಾಚರಣೆಯ ಶುಭ ಕೋರಿದರು. ಶ್ರೀ ಸಿದ್ಧಾರೂಢ ಮಠ ಟ್ರಸ್ಟ ಕಮೀಟಿಯ ಅಧ್ಯಕ್ಷರು, ಖ್ಯಾತ ಲೆಕ್ಕ ಪರಿಶೋಧಕರಾದ ಚನ್ನವೀರ ಮುಂಗುರವಾಡಿ, ಹುಬ್ಬಳ್ಳಿಯ ಜೆಜಿಎಂಎಂಸಿ ಮತ್ತು ಕೆ ಎಲ್ ಇ ಅಸ್ಪತ್ರೆಯ ನಿರ್ದೇಶಕರಾದ ಡಾ ಎಂ ಜಿ ಹಿರೇಮಠ, ಖ್ಯಾತ ನಾಟಕಕಾರ, ಹಿರಿಯ ಕಲಾವಿದ ಡಾ ಗೋವಿಂದ ಮಣ್ಣೂರ , ಕಲಾವಿದರು, ಹುಬ್ಬಳ್ಳಿಯ ವಿಜಯ ಕರ್ನಾಟಕದ ಸ್ಥಾನಿಕ ಸಂಪಾದಕ ಡಾ ಬಂಡು ಕುಲಕರ್ಣಿ , ಪ್ರಖ್ಯಾತ ಭರತನಾಟ್ಯ ಪ್ರವೀಣ, ವಿದ್ವಾನ್ ಸುಜಯ್ ಶಾನಭಾಗ, ರಾಣಿಚನ್ನಮ್ಮ ಪರಿಸರ ಸೇವಾ ಸಮಿತಿಯ ಕಾರ್ಯದರ್ಶಿ, ಬಸವ ಪರಿಸರ ಸಂರಕ್ಷಣಾ ಸಮಿತಿಯ ಕಾರ್ಯದರ್ಶಿ, ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿಯ ಜಿಲ್ಲಾ ಘಟಕದ ಉಪಾಧ್ಯಕ್ಷ, ಕರ್ನಾಟಕ ವಚನ ಸಾಹಿತ್ಯ ಪರಿಷತ್‌ನ ಜಿಲ್ಲಾ ಘಟಕದ ಕಾರ್ಯಾಧ್ಯಕ್ಷ, ಹೊರ ಕೇರಿ ಮಾಸ್ತರ ಶಿಕ್ಷಣ ಪ್ರತಿಷ್ಠಾನ ಟ್ರಸ್ಟಿ, ಗ್ರಂಥಪಾಲಕ ಡಾ. ಸುರೇಶ ಡಿ. ಹೊರಕೇರಿ , ಉತ್ತರ ಕರ್ನಾಟಕ ಸಕ್ಷಮದ ಅಧ್ಯಕ್ಷ ಡಾ ಸುನೀಲ್ ಗೋಖಲೆ, ಕೆ.ಎಂ. ಸಿ.ಆರ್.ಐ. ದ ಪ್ರಾಧ್ಯಾಪಕ ಡಾ ಕೆ.ಎಫ್. ಕಮ್ಮಾರ, ಹಿರಿಯರಾದ ರಂಗಾ ಬದ್ದಿ, ಪ್ರಾಚಾರ್ಯ ಡಾ ಮಹೇಶ್ ಡಿ. ಹೊರಕೇರಿ , ರಂಗ ಕಲಾವಿದರು, ಶಿಕ್ಷಕಿ ವೀಣಾ ಅಠವಲೆ, ಶರ್ವಿಲ್ ಸೌರಭ ನರೆಂದ್ರ, ಸೌರಭ ಸುಭಾಸ್ ನರೇಂದ್ರ , ವಿ. ಜಿ. ಪಾಟೀಲ್, ಭಾರತಿ ವಾಲಿ, ಈರಪ್ಪ ನಾಯ್ಕರ್, ಮುಂತಾದವರು ಇದ್ದರು.

# ಡಾ. ಹೇಮಾ ಪಟ್ಟಣಶೆಟ್ಟಿ ಅವರು ಧಾರವಾಡ ಜಿಲ್ಲಾ 18ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸಮ್ಮೇಳನಾಧ್ಯಕ್ಷರಾಗಿ ಆಯ್ಕೆ



**ಬೆಳಗಾವಿ ವಾರ್ತೆ ಹುಬ್ಬಳ್ಳಿ:** ಹಿರಿಯ ಸಾಹಿತಿ ಡಾ. ಹೇಮಾ ಪಟ್ಟಣಶೆಟ್ಟಿ ಅವರು ಧಾರವಾಡ ಜಿಲ್ಲಾ 18ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸಮ್ಮೇಳನಾಧ್ಯಕ್ಷ ರಾಗಿ ಆಯ್ಕೆಯಾದ ಶುಭ ಸಂಧರ್ಭದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಡಾ. ಹೇಮಾ ಪಟ್ಟಣಶೆಟ್ಟಿ ಅವರನ್ನು ಭೇಟಿ ಮಾಡಿದ ಹೊರಕೇರಿ ಮಾಸ್ತರ ಶಿಕ್ಷಣ ಪ್ರತಿಷ್ಠಾನ, ರಾಣಿಚನ್ನಮ್ಮ ಪರಿಸರ ಸೇವಾ ಸಮಿತಿಯ, ಬಸವ ಪರಿಸರ ಸಂರಕ್ಷಣಾ ಸಮಿತಿಯ ಸದಸ್ಯರು ಡಾ. ಹೇಮಾ ಪಟ್ಟಣಶೆಟ್ಟಿ ಅವರಿಗೆ ಹೊರಕೇ ರಿ ಮಾಸ್ತರ ಶಿಕ್ಷಣ ಪ್ರತಿಷ್ಠಾನ, ರಾಣಿಚ ನ್ನಮ್ಮ ಪರಿಸರ ಸೇವಾ ಸಮಿತಿಯ, ಬಸವ ಪರಿಸರ ಸಂರಕ್ಷಣಾ ಸಮಿತಿಯ ವತಿಯಿಂದ ಪ್ರೀತಿ, ಆತ್ಮೀಯತೆಯಿಂದ ಹೃದಯಪೂರ್ವಕವಾಗಿ ಗೌರವದಿಂದ ಅಭಿನಂದನೆಗಳನ್ನು ಸಲ್ಲಿಸಿ ಶುಭ ಕೋರಿದರು. ಸೋಹನ ಸುರೇಶ ಹೊರಕೇರಿ, ರಾಣಿಚನ್ನಮ್ಮ ಪರಿಸರ ಸೇವಾ ಸಮಿತಿಯ ಕಾರ್ಯದರ್ಶಿ, ಬಸವ ಪರಿಸರ ಸಂರಕ್ಷಣಾ ಸಮಿತಿಯ ಕಾರ್ಯದರ್ಶಿ, ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿಯ ಜಿಲ್ಲಾ ಘಟಕದ ಉಪಾಧ್ಯಕ್ಷ, ಕರ್ನಾಟಕ ವಚನ ಸಾಹಿತ್ಯ ಪರಿಷತ್‌ನ ಜಿಲ್ಲಾ ಘಟಕದ ಕಾರ್ಯಾಧ್ಯಕ್ಷ, ಹೊರಕೇರಿ ಮಾಸ್ತರ ಶಿಕ್ಷಣ ಪ್ರತಿಷ್ಠಾನ ಟ್ರಸ್ಟಿ, ಗ್ರಂಥಪಾಲಕ ಡಾ. ಸುರೇಶ ಡಿ. ಹೊರಕೇರಿ, ಸಾಹಿತಿ ಪ್ರೊ ಎಸ್ ಆರ್ ಆಶಿ, ಸಾಹಿತಿ ಪ್ರೊ ಕೆ ಎ ದೊಡ್ಡಮನಿ, ಪ್ರಾಚಾರ್ಯ ಡಾ ಮಹೇಶ ಡಿ ಹೊರಕೇರಿ, ಶಿಕ್ಷಕಿ ಶಕುಂತಲಾ ಎಸ್ ಹೂಗಾರ , ಎ ದರ್ಗಾ , ಸಿದ್ಧರಾಮ ಹಿಪ್ಪರಗಿ, ಸುಧಾ ಕಬ್ಬೂರ, ಮುಂತಾದವರು ಇದ್ದರು.

# ಭಗವಾನ ಮಹಾವೀರರವರ ಜಯಂತಿ ಆಚರಣೆ



ಹುಬ್ಬಳ್ಳಿವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಕೇಂದ್ರ ಕಛೇರಿ, ಹುಬ್ಬಳ್ಳಿಯಲ್ಲಿ ಜರುಗಿದ ಭಗವಾನ ಮಹಾವೀರರವರ ಜಯಂತಿಯನ್ನು ಮುಖ್ಯ ಕಾಮಗಾರಿ ಅಭಿಯಂತರರಾದ ಶ್ರೀಎಸ್.ವಿ.ಅಂಗಡಿರವರು ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ದೀಪ ಬೆಳಗಿಸುವುದರ ಮೂಲಕ ಜಯಂತಿಗೆ ಚಾಲನೆ ನೀಡಿ ಮಾತನಾಡಿ ಭಗವಾನ ಮಹಾವೀರರ ತತ್ವಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದರು. ಭಗವಾನ ಮಹಾವೀರರವರ ಬಗ್ಗೆ ಮಾತನಾಡಿದ ವಿರೂಪಾಕ್ಷ ಕಟ್ಟಿಮನಿರವ ರು ಭಗವಾನ ಮಹಾವೀರರ ಜೀವನ & ಅವರ ಸತ್ಯ, ಅಹಿಂಸೆಯ ತತ್ವಗಳ ಬಗ್ಗೆ ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ಕೇಂದ್ರ ಕಛೇರಿಯ ಸಿಬ್ಬಂದಿಗಳಾದ ವಿ.ಎಫ್. ವಿಜಾಪುರ, ಮಂಜುನಾಥ ಗಿಣಿ ಮಾವ ಮತ್ತು ಕೇಂದ್ರ ಕಛೇರಿಯ ಇನ್ನಿತರ ಸಿಬ್ಬಂದಿಗಳು ಇದ್ದರು. ವಿರೂಪಾಕ್ಷ ರವರು ಕಾರ್ಯಕ್ರಮವನ್ನು ನಿರೂಪಿಸಿದರು.

# ಮಹಾವೀರರ ತತ್ವಗಳು ಮೇಲೆ ಉಪನ್ಯಾಸ ಮಾಲಿಕೆ



**ಬೆಳಗಾವಿ ವಾರ್ತೆ ಲಕ್ಷ್ಮೇಶ್ವರ:** ಪಟ್ಟಣದ ಡಾ. ಮಲ್ಲಾಡ ಕಾಲೋನಿಯ ಎಲ್ ಆರ್ ಮಲಸಮುದ್ರ ಅವರ ಸ್ವಗ್ರಹದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಮಾಸದ ಮಾತು ಸರಣಿಯ ವರ್ಧನ್ ಮಹಾವೀರರ ತತ್ವಗಳು ಇದರ ಮೇಲೆ ಉಪನ್ಯಾಸ ಮಾಲಿಕೆಯನ್ನು ಹಮ್ಮಿಕೊಳ್ಳಲಾಗಿತ್ತು.

ಉಪನ್ಯಾಸಕರಾಗಿ ಆಗಮಿಸಿದ್ದ ಕರ್ನಾಟಕ ವಿಶ್ವವಿದ್ಯಾನಿಲಯದ ಜೈನ ಪೀಠದ ಮುಖ್ಯಸ್ಥರು ಹಾಗೂ ಸಾಹಿತಿ ಡಾ. ಜನದತ್ತ ಹಡಗಲಿಯವರು ಯುದ್ಧ ಘರ್ಷಣೆ ಸಂಘರ್ಷ ರಕ್ತಪಾತಗಳಿಗೆ ಭಗವಾನ್ ಮಹಾವೀರರ ತತ್ವ ಸಿದ್ಧಾಂತಗಳೆ ಪರಿಹಾರ ಎಂದು ಹೇಳಿದರು.

ಅವರು ಸತ್ಯ ಶಾಂತಿ ಮತ್ತು ಅಹಿಂಸೆ ಪರಧರ್ಮವಾಗಬೇಕಿದೆ ಜೈನ ಧರ್ಮವು ಬಾಳ ಬಾಳ ಬಿಡು ಎಂಬ ಸಿದ್ಧಾಂತದಲ್ಲಿ ನಂಬಿಕೆ ಇಟ್ಟು ಎಲ್ಲ ಧರ್ಮದವರೊಂದಿಗೆ ಸಮನ್ವತೆಯಿಂದ ಬಾಳಿ ಬದುಕುತಿದೆ ಎಂದು ಹೇಳಿದವರು ನಾವೆಲ್ಲರೂ ಇಂದಿನ ಅಶಾಂತಿಯ ವಾತಾವರಣಕ್ಕೆ ಕೊನೆ ಹಾಡಬೇಕಾದರೆ ವರ್ಧಮಾನ ಮಹಾವೀರರ ತತ್ವ ಸಿದ್ಧಾಂತಗಳನ್ನು ಪ್ರತಿಯೊಬ್ಬರು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಚಿಂತಕ ಎಲ್ ಆರ್ ಮಲಸಮುದ್ರ ಅವರು ಯುದ್ಧವಿಲ್ಲದೆ ಜಗತ್ತು ಗೆದ್ದ ಮಹಾಪುರುಷ ಭಗವಾನ್ ವರ್ಧಮಾನ್ ಮಹಾವೀರರು ಅವರು ಬೋಧಿಸಿದ ತತ್ವ ಸಿದ್ಧಾಂತಗಳು ಎಂದೆಂದಿಗೂ ಅಜರಾಮರ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಬಿಎಂ ಕುಂಬಾರ, ಎಬಿ ಪಾಟೀಲ್, ಅನಂತರಾಜ ಮಿಣಜಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಸಾಹಿತ್ಯ ಪರಿಷತ್ತಿನ ತಾಲೂಕ ಘಟಕದ ಅಧ್ಯಕ್ಷ ಈಶ್ವರ್ ಮೆಡ್ಲೇರಿ ಪ್ರಾಸ್ತಾವಿಕ ಮಾತನಾಡಿದರು.

ಕಾರ್ಯಕ್ರಮದಲ್ಲಿ ಎನ್ ಓ ಹಡಗಲಿ, ಎಎಂ ಮಠದ ಸೇರಿದಂತೆ ಪದಾಧಿಕಾರಿಗಳು, ಶ್ರಾವಕರು, ಶ್ರಾವಕಿಯರು, ಚಿಂತಕರು ಪಾಲ್ಗೊಂಡಿದ್ದರು. ಈರಣ್ಣ ಗಾಣಿಗೇರ, ಎಸ್ ಬಿ ಅಣ್ಣಿಗೇರಿ, ಈರಣ್ಣ ಅಕ್ಕೂರ ನಿರ್ವಹಿಸಿದರು.

# ಮಹಾವೀರ ಜಯಂತಿ ಆಚರಣೆ



**ಬೆಳಗಾವಿ ವಾರ್ತೆ ನವಲಗುಂದ:** ಪಟ್ಟಣದಲ್ಲಿರುವ ಭಗವಾನ್ ಶ್ರೀ ಆದಿನಾಥ ದಿಗಂಬರ ಜೈನ ಮಂದಿರದಲ್ಲಿ ಹಾಗೂ ತಾಲ್ಲೂಕು ಆಡಳಿತದಿಂದ ತಹಶೀಲ್ದಾರ ಕಚೇರಿಯಲ್ಲಿ ಭಗವಾನ್ 1008 ಮಹಾವೀರ್ ತೀರ್ಥಂಕರರ ಜನ್ಮದಿನ ಆಚರಿಸಲಾಯಿತು.

ಜೈನ ಮಂದಿರದಲ್ಲಿ ಶಾಸಕ ಎನ್ ಎಚ್ ಕೋನರಡ್ಡಿ ಭಾಗವಹಿಸಿ ಮಾತನಾಡಿ 'ಎರಡೂವರೆ ಸಾವಿರ ವರ್ಷಗಳ ಇತಿಹಾಸವಿರುವ ಜೈನ ಧರ್ಮದ ವಿಚಾರಗಳು ಸಮಾಜಕ್ಕೆ ಮುಟ್ಟುವಂತಾಗಬೇಕು. ಜೈನ ಧರ್ಮದಲ್ಲಿ ಮಹಾವೀರ, ಭರತ ಸೇರಿದಂತೆ ನೂರಾರು ಮಹಾಪುರುಷರು ಹುಟ್ಟಿ ಸಮಾಜಕ್ಕೆ ಉತ್ತಮ ವಿಚಾರಗಳನ್ನು ಸಾರಿದ್ದಾರೆ. ಅವು ಕೃತಿ, ಗ್ರಂಥ, ಓಲೆಗರಿಗಳಿಗೆ ಸೀಮಿತವಾಗದೆ ಪುಸ್ತಕ ರೂಪದಲ್ಲಿ ಬಂದು ಮಕ್ಕಳು ಓದುವಂತಾಗಬೇಕು ಎಂದರು

ಜೈನ್ ಸಮಾಜದ ತಾಲ್ಲೂಕು ಅಧ್ಯಕ್ಷ ವಿದ್ಯಾಧರ ಪಾಟೀಲ ಮಾತನಾಡಿ ಶಾಂತಿಯ ಸಂದೇಶ ಸಾರಿದ ಭಗವಾನ್ ಮಹಾವೀರರ ಆದರ್ಶ, ತತ್ವಗಳು ಸರ್ವಕಾಲಕ್ಕೂ ಪ್ರಸ್ತುತ ಎಂದರು. ಇದಕ್ಕೂ ಮೊದಲು ಪಟ್ಟಣದಲ್ಲಿ ಮಹಾವೀರರ ಮೂರ್ತಿಯ ಭವ್ಯ ಮೆರವಣಿಗೆ ನಡೆಯಿತು.

ತಹಶೀಲ್ದಾರ ಸುಧೀರ ಸಾಹುಕಾರ, ತಾ ಪಂ ಇಒ ಪಿ ಆರ್ ಬಡೇಖಾನಾವರ, ಮುಖ್ಯಾಧಿಕಾರಿ ಎಸ್ ಪಿ ಪೂಜಾರ, ಸಮಾಜದ ಹಿರಿಯರಾದ ವಿಜಯನಗೌಡ ಪಾಟೀಲ, ಮರಿಗೌಡರು ಪಾಟೀಲ, ಮನೋಹರ ಪಾಟೀಲ, ಅಶೋಕ ಪಾಟೀಲ, ಸೋಮನಗೌಡ್ರು ಪಾಟೀಲ, ಶಾಂತಿನಾಥ್ ಪಾಟೀಲ, ಸುಕುಮಾರ ಪಾಟೀಲ, ಸಂತೋಷ ಪಾಟೀಲ, ಗಿರೀಶ ಪಾಟೀಲ, ಬಿಪಿನ್ ಪಾಟೀಲ, ರವಿ ಪಾಟೀಲ, ಜಿನ್ನಪ್ಪ ಹನಸಿ, ಹನುಮಂತಗೌಡ ಪಾಟೀಲ, ಶಾಮನಗೌಡ ಪಾಟೀಲ, ಭರಮಪ್ಪ ಹನಸಿ, ಸೋಮು ಪಾಟೀಲ, ಲತಾ ಪಾಟೀಲ, ಇಂದ್ರವ ಹನಸಿ , ಸುಶೀಲಾ ಹನಸಿ, ಶಂಕ್ರವ್ವ ಹನಸಿ, ಕೌಶಲ್ಯ ರಂಗೋಲಿ, ತ್ರಿಶಲಾ ಪಾಟೀ ಲ , ಸುರೇಖಾ ಪಾಟೀಲ , ಭಾರತಿ ಪಾಟೀಲ , ಪದ್ಮಾವತಿ ಪಾಟೀಲ, ಲತಾ ಪಾಟೀಲ, ಇಂದ್ರವ ಹನ್ಸಿ, ಸುಶೀಲಾ ಹನಸಿ, ಶಂಕ್ರವ್ವ ಹನಸಿ, ಕೌಶಲ್ಯ ರಂಗೋಲಿ ಹಾಗೂ ಸಮಸ್ತ ಶ್ರಾವಕ ಶ್ರಾವಕಿಯರು ಇದ್ದರು.

# ತ್ರಿಭಾಷಾ ಸೂತ್ರ ಮುಂದುವರಿಸಲು ಆಗ್ರಹ: ಶಿಕ್ಷಕರಿಂದ ಬೃಹತ್ ಮೆರವಣಿಗೆ



**ಬೆಳಗಾವಿ ವಾರ್ತೆ ಹುಬ್ಬಳ್ಳಿ:** ರಾಜ್ಯದಲ್ಲಿ ತ್ರಿಭಾಷಾ ಸೂತ್ರ ಮುಂದುವರಿಸಲು ರಾಜ್ಯ ಸರ್ಕಾರದ ಮೇಲೆ ಒತ್ತಡ ತರಬೇಕೆಂದು ನೂರಾರು ಹಿಂದಿ ಶಿಕ್ಷಕರು ವಿಪ ಸಭಾಪತಿ ಬಸವರಾಜ ಹೊರಟ್ಟಿ ಅವರ ನಿವಾಸಕ್ಕೆ ತೆರಳಿ ಮನವಿ ಮಾಡಿದರು.

ಇಲ್ಲಿಯ ಪಿಂಟೋ ರಸ್ತೆಯ ಅವರ ನಿವಾಸಕ್ಕೆ ಭೇಟಿ ನೀಡಿದ ನೂರಾರು ಹಿಂದಿ ಶಿಕ್ಷಕರು, ರಾಜ್ಯ ಸರ್ಕಾರದ ಹಿಂದಿ ವಿಷಯದ ಗ್ರೇಡಿಂಗ್ ನೀತಿ ಖಂಡನಾರ್ಹ. ಇದರಿಂದ 15 ಸಾವಿರಕ್ಕೂ ಹೆಚ್ಚು ಹಿಂದಿ ಶಿಕ್ಷಕರು ಮತ್ತು ಅವರ ಕುಟುಂಬ ಆತಂತ್ರವಾಗಿವೆ. ಅಲ್ಲದೆ, ರಾಷ್ಟ್ರೀಯ ಏಕತೆಯ ಹಿತದೃಷ್ಟಿಯಿಂದ 1961ರಲ್ಲಿ ಜಾರಿಯಾದ ಬಹು ಭಾಷಾ ಕಲಿಕೆಗೆ ಪೆಟ್ಟು ಬಿದ್ದಿದೆ. ಆದ್ದರಿಂದ ಈ ಕೂಡಲೇ ಗ್ರೇಡಿಂಗ್ ಪದ್ಧತಿ ಕೈಬಿಟ್ಟು ಈ ಹಿಂದೆ ಇದ್ದಂತೆ ಹಿಂದಿ ವಿಷಯಕ್ಕೆ ಅಂಕ ನೀಡುವ ಪದ್ಧತಿ ಜಾರಿಗೊಳಿಸಿ ಯಥಾವತ್ತಾಗಿ ತ್ರಿಭಾಷಾ ಸೂತ್ರ ಮುಂದುವರಿಸಬೇಕೆಂದು ಒತ್ತಾಯಿಸಿದರು.

# ಉಚಿತ ಸೈಕಲ್ ವಿತರಣೆ



**ಬೆಳಗಾವಿ ವಾರ್ತೆ ಕುಂದಗೋಳ:** ವಿದ್ಯಾರ್ಥಿಗಳಿಗೆ ಸರ್ಕಾರ, ಸಂಘ ಸಂಸ್ಥೆಗಳು ಅನೇಕ ರೀತಿಯಲ್ಲಿ ಜ್ಞಾನಾರ್ಜನೆಗೆ ನೆರವು ನೀಡುತ್ತಿದ್ದು, ಇದರ ಸದುಪಯೋಗ ಪಡಿಸಿಕೊಳ್ಳಬೇಕೆಂದು ಮಾಜಿ ಶಾಸಕ ಎಂ.ಎಸ್. ಅಕ್ಕಿ ಹೇಳಿದರು.

ಕೆನರಾ ರೊಬೆಕೊ ಸ್ಕಿಮ್ ನಲ್ಲಿ 9 ಮತ್ತು 10ನೇ ತರಗತಿಯಲ್ಲಿ ಅತೀ ಹೆಚ್ಚು ಅಂಕ ಪಡೆದ 90 ವಿದ್ಯಾರ್ಥಿಗಳಿಗೆ ಕುಂದಗೋಳ ತಾಲೂಕಿನ ಕಳಸ ಗ್ರಾಮದ ನ್ಯೂ ಹೈಸ್ಕೂಲ್ ಆವರಣದಲ್ಲಿ ಅವರು ಸೈಕಲ್ ವಿತರಿಸಿ ಮಾತನಾಡಿದರು.

ಕೆನರಾ ಬ್ಯಾಂಕಿನ ರೀಜನಲ್ ಮ್ಯಾನೇಜರ್ ಸದಾನಂದ ಪ್ಯಾಟಿ ಮಾತನಾಡಿ, ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಅನುಕೂಲಕ್ಕೆ ಸೈಕಲ್ ವಿತರಣೆ ಮಾಡಲಾಗಿದೆ ಎಂದು ಹೇಳಿದರು.

ಮು.ಶಿ ಎಂ. ವಿ. ಮೆಣಸಿನಕಾಯಿ, ನೀಲಪ್ಪ ಗದ್ದಿ, ಅಜ್ಜಪ್ಪ ಹೂರಕೇರಿ, ಲಿಂಗರಾಜ ಬೆಲ್ಲದ, ಚಂದ್ರಶೇಖರ ಯಾದವಾಡ, ಹಿರಿಯ ನ್ಯಾಯವಾಡಿ ಆರ್.ಎಂ.ಕಮತದ, ಎಚ್.ಸಿ. ಕಲ್ಲಣ್ಣವರ ಇತರರು ಇದ್ದರು.

BELAGAVI VARTE Kannada Daily morning news paper Editor, Printer, Publisher and Owned by MAHESHWARI BHIMASHI BHARAMANNAVAR, 221/1A/1A/1A MAHALINGESHWAR NAGAR, NEAR BCA HOSTEL BELAGAVI KARNATAKA 591307 . Printed at RAJADHANI PRINTING PRESS, CTS NO.1720/B1, SHOP NO.2 KELKARBAG, BELAGAVI , KARNATAKA - 590001